WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮೇ ೩೧, ೨೦೧೨ (ಜ್ಯೇಷ್ಠ ೧೦, ಶಕ ವರ್ಷ ೧೯೩೪)	ಸಂಚಿಕೆ ೨೨

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ಸಂಖ್ಯೆ ಮೂಅಇ 254 ಮೂಇವಿ 2011 ಬೆಂಗಳೂರು, ದಿನಾಂಕ: 11–05–2012.

ಅಧಿಸೂಚನೆ

ಕರ್ನಾಟಕ ಸರ್ಕಾರದ ಸಚಿವಾಲಯ ಮೂಲಸೌಲಭ್ಯ ಇಲಾಖೆಯು ಡಾ: ಅಂಬೇಡ್ಕರ್ ವೀಧಿಯ ವಿಕಾಸ ಸೌಧ, ನೆಲಮಹಡಿ, ಬೆಂಗಳೂರು–560 001ಇಲ್ಲಿ ನೆಲೆಗೊಂಡಿದೆ. ಭಾರತ ಸರ್ಕಾರದ ಮಾಹಿತಿ ಹಕ್ಕು ಕಾಯಿದೆ 2005 ರ ಕಲಂ 4(1) ಬಿ ಅನುಸಾರ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಸಂಬಂದಿಸಿದಂತೆ ಈ ಕೆಳಕಂಡ ಮಾಹಿತಿಗಳನ್ನು ಪ್ರಕಟಿಸಲಾಗಿದೆ.

ಮೂಲಸೌಲಭ್ಯ ಇಲಾಖೆಯು ದಿನಾಂಕ 20–09–1996 ರಿಂದ ಆಸ್ತಿತ್ವಕ್ಕೆ ಬಂದಿದ್ದು, ಸರ್ಕಾರದ ಒಂದು ಹೊಸ ಮತ್ತು ಸಣ್ಣ ಇಲಾಖೆಯಾಗಿದೆ. ಇದಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು ಮುಖ್ಯಸ್ಥರಾಗಿದ್ದು ಅವರಿಗೆ ಸಹಾಯ ಮಾಡಲು ವಿಶೇಷ ಕಾರ್ಯದರ್ಶಿ, ಒಬ್ಬರು ನಿರ್ದೇಶಕರು (ಪಿಪಿಪಿ ಕೋಶ) ಇಬ್ಬರು ಉಪ ಕಾರ್ಯದರ್ಶಿಗಳು, ಇಬ್ಬರು ಅಧೀನ ಕಾರ್ಯದರ್ಶಿಗಳು ಹಾಗೂ ತಾಂತ್ರಿಕ ಶಾಖೆಯಲ್ಲಿ ಪೂರಕ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದು ಸಚಿವಾಲಯದ ಒಂದು ಇಲಾಖೆ ಮಾತ್ರವಾಗಿರುತ್ತದೆ ಇದಕ್ಕೆ ಕ್ಷೇತ್ರ ಮಟ್ಟದಲ್ಲಿ ಯಾವುದೇ ಅಧೀನ ಇಲಾಖೆಗಳಿರುವುದಿಲ್ಲ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು, ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆದಾರರಿಗೆ ಅಗತ್ಯ ಮಾರ್ಗದರ್ಶನವನ್ನು, ಅನುಕೂಲತೆಗಳನ್ನು ಒದಗಿಸುವ ಜವಾಬ್ದಾರಿ ಹೊಂದಿದೆ. ವಿವಿಧ ವಲಯಗಳ ಮೂಲಸೌಲಭ್ಯ ಅಗತ್ಯತೆಗಳನ್ನು ಗುರುತಿಸುವುದರೊಂದಿಗೆ, ಅಭಿವೃದ್ಧಿಪಡಿಸಬೇಕಾದಂತಹ ಕ್ಷೇತ್ರಗಳನ್ನು ಗುರುತಿಸುವುದು, ನಿಖರವಾದ ಯೋಜನೆಗಳ ವಿವರಗಳನ್ನು ಸಿದ್ಧಪಡಿಸುವುದು ಮತ್ತು ಯೋಜನೆಗಳ ಮೌಲ್ಯೀಕರಣ ಮಾಡಿ ಖಾಸಗಿ ವಲಯವು ಕೈಗೆತ್ತಿಕೊಳ್ಳಲು ಏರ್ಪಾಡು ಮಾಡುವುದು ಮತ್ತು ಯೋಜನೆಗಳನ್ನು ಒಂದು ಸರಿಯಾದ ತಿಳುವಳಿಕೆ ಒಪ್ಪಂದದಡಿ ಖಾಸಗಿ ವಲಯದವರಿಗೆ ವಹಿಸುವುದು. ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗಳಿಗೆ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ರಾಜ್ಯಸರ್ಕಾರದ ಸಲಹೆಗಾರನಾಗಿ ಕಾರ್ಯನಿರ್ವಹಿಸುತ್ತದೆ.

ಜೂನ್ 2000ದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ (ಕರ್ನಾಟಕ) (ಐಡೆಕ್)ಅನ್ನು ಖಾಸಗಿ ಬಂಡವಾಳ ಹೂಡಿಕೆಯನ್ನು ವೃದ್ಧಿಪಡಿಸಲು ಮತ್ತು ಸಾರ್ವಜನಿಕ ಖಾಸಗಿ ಪಾಲುದಾರರು ಮೂಲಸೌಲಭ್ಯ ಅಭಿವೃದ್ಧಿಯಲ್ಲಿ ತೊಡಗಲು ಅನುವು ಮಾಡಿಕೊಡುವುದಕ್ಕೆ ಒಂದು ನೋಡೆಲ್ ಏಜೆನ್ಸಿಯಾಗಿ ಸ್ಥಾಪಿಸಲಾಯಿತು. ಐಡೆಕ್‌ನ ಸಂದಾಯಿತ – ಬಂಡವಾಳವು ರೂ.10.00 ಕೋಟಿಗಳಾಗಿವೆ. ಇದರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು

ಶೇಕಡ 49 ರಂತೆ, ಐ.ಡಿ.ಎಫ್.ಸಿ.ಯು ಶೇಕಡ 49.5 ರಂತೆ ಮತ್ತು ಹೆಚ್‌ಡಿಎಫ್‌ಸಿ ಯು ಉಳಿದ ಶೇಕಡ 1.5 ರಷ್ಟನ್ನು ಹೊಂದಿದೆ. ಈ ಷೇರು ಬಂಡವಾಳವಲ್ಲದೆ ಯೋಜನಾ ಅಭಿವೃದ್ಧಿಗಾಗಿ ಹಾಗೂ ಯೋಜನಾ ಹೂಡಿಕೆಗಾಗಿ ಹಣ ಒದಗಿಸಲು ಕರ್ನಾಟಕ ರಾಜ್ಯ ಸರ್ಕಾರವು ಬದ್ಧವಾಗಿದೆ. ಖಾಸಗಿ ವಲಯದ ಸಹಭಾಗಿತ್ವದಲ್ಲಿ ಜಾರಿಗೊಳಿಸುವಂತಹ ಮೂಲಸೌಲಭ್ಯಗಳ ಸರಣಿ ಯೋಜನೆಗಳನ್ನು ಐಡೆಕ್ ಸಂಸ್ಥೆಯು ಕೈಗೆತ್ತಿಕೊಂಡಿದೆ. ಈ ನಿಟ್ಟಿನಲ್ಲಿ , ಪ್ರವಾಸೋದ್ಯಮ, ರಸ್ತೆ ಕೈಗಾರಿಕೆ, ನಗರಾಭಿವೃದ್ಧಿ ಇತ್ಯಾದಿ ವಲಯಗಳಿಗೆ ಸಂಬಂಧಿಸಿದ ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಸಂಸ್ಥೆಗಳ ಜೊತೆ ಐಡೆಕ್ ವ್ಯವಹರಿಸುತ್ತಿದೆ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ರಚನೆ ಮತ್ತು ಕರ್ತವ್ಯಗಳು (i). ಇಲಾಖೆಯ ಅಧಿಕಾರಿಗಳ ಮತ್ತು ನೌಕರರ ವ್ಯಾಪ್ತಿ ಕರ್ತವ್ಯಗಳು; ನಿರ್ಣಯಗಳನ್ನು ತೆಗೆದುಕೊಳ್ಳಲು ಅಳವಡಿಸಿಕೊಂಡಿರುವ ಮಾರ್ಗಸೂಚಿಗಳು ಮತ್ತು ಅನುಸರಿಸುತ್ತಿರುವ ನಿಯಮಗಳ ಹಾಗೂ ನಿಬಂಧನೆಗಳು: ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ಕರ್ನಾಟಕ ಸರ್ಕಾರ ಸಚಿವಾಲಯದ ಒಂದು ಇಲಾಖೆಯಾಗಿರುತ್ತದೆ. ಸರ್ಕಾರವು ರಚಿಸಿರುವ ಕರ್ನಾಟಕ ಸರ್ಕಾರ ವ್ಯವಹಾರ ನಿಯಮಗಳು 1977 ಮತ್ತು ಕರ್ನಾಟಕ ಸರ್ಕಾರ ವ್ಯವಹಾರ ಹಂಚಿಕೆಯ ನಿಯಮಗಳು, 1977ರ ಪ್ರಕಾರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ನಿಗದಿಪಡಿಸಿರುವ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಿಸಲಾಗುತ್ತಿದೆ. ಇದಲ್ಲದೆ ಸಚಿವಾಲಯ ಕಛೇರಿ ಕೈಪಿಡಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ ಹಾಗೂ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ನಿಯಮಗಳು ಹಾಗೂ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಕಾರ್ಯಗಳಿಗೆ ಪೂರಕವಾಗಿ ಈ ಕೆಳಕಂಡ ಅಭಿವೃದ್ಧಿ ಏಜೆನ್ಸಿಗಳು ಕಾರ್ಯನಿರ್ವಹಿಸುತ್ತಿವೆ.

(ಎ) ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ (ಕೆಎಸ್‌ಐಐಡಿಸಿ)

(ಬಿ) ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕೆ–ಆರ್‌ಐಡಿಇ)

(ಸಿ) ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತ (ಬಿಎಆರ್‌ಎಲ್)

(ಡಿ) ಮೂಲಸೌಲಭ್ಯ ಅಭಿವೃದ್ಧಿ ನಿಗಮ (ಕರ್ನಾಟಕ) (ಐಡೆಕ್) ನಿಯಮಿತ

(ಇ) ಕರ್ನಾಟಕ ಮೂಲಸೌಲಭ್ಯ ಯೋಜನಾ ಅಭಿವೃದ್ಧಿ ನಿಗಮ (ಕೆಐಪಿಡಿಸಿ) ಮತ್ತು ಕರ್ನಾಟಕ ಗೃಹ ಮಂಡಳಿ (ಕೆಹೆಚ್‌ಬಿ) ಇವುಗಳು ನಿರ್ದಿಷ್ಟ ಯೋಜನಾ ಅಭಿವೃದ್ಧಿಗೆ ನೆರವು ನೀಡುತ್ತವೆ.

ಈ ಇಲಾಖೆಯು ಈ ಕೆಳಗೆ ಹೇಳಲಾದ ಕಾರ್ಯದ ಬಗ್ಗೆ ವ್ಯವಹರಿಸುತ್ತದೆ:

(ಎ) ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ (ಪಿಪಿಪಿ) ಆಧಾರದ ಮೇಲೆ ಬೃಹತ್ ಮೂಲಸೌಲಭ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದು.

(ಬಿ) ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವುದು.

(ಸಿ) ವಿಮಾನ ಇಳಿಯುವ ದಾರಿಗಳನ್ನು ಅಭಿವೃದ್ಧಿಪಡಿಸುವುದು.

(ಡಿ) ರೈಲ್ವೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ರೈಲ್ವೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವುದು.

(ಇ) ಧಾಬೋಲ್ – ಬೆಂಗಳೂರು ಅನಿಲ ಕೊಳವೆ ಮಾರ್ಗ ಯೋಜನೆ.

ಸರ್ಕಾರದ ಮುಖ್ಯ ಉದ್ದೇಶ ರಾಜ್ಯದಲ್ಲಿ ಮೂಲಸೌಲಭ್ಯವನ್ನು ಮೇಲ್ದರ್ಜೆಗೇರಿಸುವಲ್ಲಿ, ವಿಸ್ತರಣೆ ಮಾಡುವಲ್ಲಿ ಹಾಗೂ ಅಭಿವೃದ್ಧಿ ಪಡಿಸುವಲ್ಲಿ ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆಯನ್ನು ಸುಗಮಗೊಳಿಸಲು ಮತ್ತು ಸಾರ್ವಜನಿಕ–ಖಾಸಗಿ ಸಹಬಾಗಿತ್ವಕ್ಕೆ (ಪಿಪಿಪಿ) ಪ್ರೋತ್ಸಾಹ ನೀಡಲು ಸಹಾಯವಾಗುವಂತೆ ಯುಕ್ತವಾದ ಮತ್ತು ಪಾರದರ್ಶಕವಾದ ನೀತಿಯ ಚೌಕಟ್ಟನ್ನು ಒದಗಿಸುದಾಗಿರುತ್ತದೆ.

<u>ಸೆಕ್ಷನ್ 4(1) ಬಿ (1) ಸಂಘಟನಾ ತ:ಖ್ತೆ:</u>

ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಈ ಇಲಾಖೆಯ ವಿವಿಧ ಶಾಖೆಗಳಲ್ಲಿ ಈ ಕೆಳಕಂಡ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ

<u>ಶಾಖೆ–ಎ:</u>

- ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ ಮತ್ತು ಬಿ.ಐ.ಎ.ಎಲ್ ವಿಷಯಗಳು. ಹೈ – ಸ್ಪೀಡ್ ರೈಲ್ ಲಿಂಕ್ (HSRL) ಹಾಗೂ ಬೆಂಗಳೂರು ಏರ್‌ಪೋರ್ಟ್ ರೈಲ್ ಲಿಂಕ್ (BARL) ಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು, ದೇವನಹಳ್ಳಿ ಬಿಸಿನೆಸ್ ಪಾರ್ಕ್ ಅಭಿವೃದ್ಧಿ, ಟ್ರಂಪೆಟ್ ಇಂಟರ್‌ಚೇಂಜ್ ವಿಷಯ, ದೇವನಹಳ್ಳಿ ಸಮೀಪದ 32.5 ಎಕರೆ ಪ್ರದೇಶದಲ್ಲಿ ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ವಿಷಯಗಳು, ಬಿಐಎಪಿ ಕೋಶಕ್ಕೆ ಸಂಬಂಧಿಸಿದ ವಿಷಯ.

- ವಿಮಾನ ನಿಲ್ದಾಣಕ್ಕೆ ಅಗತ್ಯವಾದ ವಿದ್ಯುತ್ ಸರಬರಾಜು ವಿಷಯ.
- ಇತರೆ ಸಣ್ಣ ವಿಮಾನ ನಿಲ್ದಾಣಗಳು, ವಿಮಾನ ಇಳಿದಾಣಗಳು, ಹೆಲಿಪ್ಯಾಡ್ ನಿರ್ಮಾಣ.
- ಪರ್ಯಾಯ ರಸ್ತೆ ಅಭಿವೃದ್ಧಿ, ನಿರ್ಮಾಣ ಇತ್ಯಾದಿಗೆ ಸಂಬಂಧಿಸಿದ ವಿಷಯಗಳು.
- ಐಡೆಕ್ ಮೂಲಕ ನಿರ್ವಹಿಸಲಾಗುವ ವಿಷಯಗಳು.
- Aviation Turbine Fuel Tax Reimbursement ಗೆ ಸಂಬಂಧಿಸಿದ ವಿಷಯಗಳು.
- ಬಂದರುಗಳು.
- ಮೇಲಿನ ವಿಷಯಕ್ಕೆ ಸಂಬಂಧಪಟ್ಟ ವಿಧಾನ ಮಂಡಲದ/ನ್ಯಾಯಾಲಯದ ಎಲ್ಲಾ ವಿಷಯಗಳು.
- ಇದರೊಂದಿಗೆ ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸಿದ ವಿಷಯಗಳು.
- ಸಚಿವಾಲಯದ ಕೈಪಿಡಿಯಲ್ಲಿ ಸೂಚಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು.

ಶಾಖೆ – ಬಿ:

- K-RIDE, HMRDC, KRCL ಇತರೆ ರೈಲ್ವೆ ಸಂಸ್ಥೆಗಳಿಗೆ ಸಂಬಂಧಿಸಿದ ವಿಷಯಗಳು.
- ರೈಲ್ವೆ ಸುರಕ್ಷತಾ ಯೋಜನೆಗಳಾದ ರಸ್ತೆ ಕೆಳ ಸೇತುವೆ, ರಸ್ತೆ ಮೇಲ್ಸೇತುವೆ, level crossing ನಿರ್ಮಾಣ / ನಿರ್ವಹಣೆ, ಉಸ್ತುವಾರಿ ಹಾಗೂ ಇದಕ್ಕೆ ಸಂಬಂಧಿಸಿದ ರಾಜ್ಯ ಮಟ್ಟದ RoB/RuB ಸಂಚಲನಾ ಸಮಿತಿ (State level RoB/RuB Steering Committee) ವಿಷಯಗಳು.
- ನಗರ ಮೂಲಸೌಲಭ್ಯ ಅಭಿವೃದ್ಧಿ (Urban Infrastructure) ವಿಷಯಗಳಿಗೆ ಸಂಬಂಧಿಸಿದ ಅಂದರೆ commuter Rail Service, Metro Rail, DULTA, BMTTP ಇತ್ಯಾದಿ ಸಂಸ್ಥೆಗಳಿಗೆ ಸಂಬಂಧಿಸಿದ ವಿಷಯಗಳು.
- ಮೇಲಿನ ವಿಷಯಕ್ಕೆ ಸಂಬಂಧಪಟ್ಟ ವಿಧಾನ ಮಂಡಲದ / ನ್ಯಾಯಾಲಯದ ಎಲ್ಲಾ ವಿಷಯಗಳು
- ಇದರೊಂದಿಗೆ ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸಿದ ವಿಷಯಗಳು.
- ಸಚಿವಾಲಯದ ಕೈಪಿಡಿಯಲ್ಲಿ ಸೂಚಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು.

ಶಾಖೆ – ಸಿ

- ದಾಬೋಲ್ –ಬೆಂಗಳೂರು ಅನಿಲ ಕೊಳವೆ ಮಾರ್ಗ ಯೋಜನೆ,
- ಆರ್.ಎಫ್.ಡಿ., ಸಿಟಿಜನ್ ಚಾರ್ಟರ್, ಯೋಜನಾ ಮತ್ತು ಆರ್ಥಿಕ ಇಲಾಖೆಯ ಸಂಬಂಧಿಸಿದ ಮಾಹಿತಿ ನೀಡುವ, ಎಸ್.ಸಿ.ಪಿ. ಟಿ.ಎಸ್.ಪಿ, ಯೋಜನಾ ಪ್ರಗತಿ ಹಾಗೂ ಇಲಾಖೆಯ ಯೋಜನೆಗಳಿಗೆ ಕಾಲ ಕಾಲಕ್ಕೆ ಬಿಡುಗಡೆ ಮಾಡಲಾಗುವ ಅನುದಾನ, ಅದರ ಉಪಯೋಗ, ಯೋಜನೆಯ ಭೌತಿಕ ಪ್ರಗತಿ ಇತ್ಯಾದಿ ಕುರಿತಂತೆ ಯೋಜನಾ ಇಲಾಖೆ / ಆರ್ಥಿಕ ಇಲಾಖೆ / ಮಹಾ ಲೇಖಪಾಲರು / ಖಜಾನೆ ಇಲಾಖೆಗೆ ಕಾಲ ಕಾಲಕ್ಕೆ ನೀಡಬೇಕಾದ ಮಾಹಿತಿಯ ಸಮನ್ವಯ ಹಾಗೂ ಕ್ರೋಢೀಕರಣ.
- MMR / KDP ಸಭೆಗಳಿಗೆ ಒದಗಿಸಬಹುದಾದ ಮಾಹಿತಿಯ ಕ್ರೋಢೀಕರಣ ಹಾಗೂ ವಿವರಗಳನ್ನು MPIC ನಮೂನೆಯಲ್ಲಿ ಪಡೆದು ಒದಗಿಸುವುದು.
- ಮೂಲಸೌಲಭ್ಯ ಅಭಿವೃದ್ಧಿ ನೀತಿ ಮತ್ತು ಈ ನೀತಿಯ ಪ್ರಕಾರ ನೀಡಬಹುದಾದ ಉತ್ತೇಜನಗಳು ಮತ್ತು ರಿಯಾಯ್ತಿಗಳು.

ಶಾಖೆ –ಡಿ

- ಮೇಲಿನ ಎರಡೂ ಶಾಖೆಗಳಿಗೂ ಹಂಚಿಕೆಯಾಗದೇ ಇರುವ ಸಮನ್ವಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು.
- ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವ ಇತರೆ ಸಾಮಾನ್ಯ ವಿಷಯಗಳು.
- ಸಚಿವಾಲಯದ ಕೈಪಿಡಿಯಲ್ಲಿ ಸೂಚಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು.
- ಕೆ.ಆರ್.ಡಿ.ಸಿ.ಎಲ್., ಕೆ.ಟಿ.ಪಿ.ಓ.ನಲ್ಲಿ ಪ್ರ.ಕಾ.ರವರು ನಿರ್ದೇಶಕರಾಗಿರುವ ವಿಷಯಗಳ ನಿರ್ವಹಣೆ.
- ಇಲಾಖೆಯ ಸಮನ್ವಯ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ ವಿಷಯಗಳು ಹಾಗೂ ಸಹಾಯಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಣೆ.
- ವಿಧಾನ ಮಂಡಲದ ವಿಷಯಗಳ ಸಮನ್ವಯ ವಾರ್ಷಿಕ ವರದಿ/ ಕಾರ್ಯನಿರ್ವಹಣಾ ವರದಿ ಇತ್ಯಾದಿ.
- ಇದರೊಂದಿಗೆ ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸಿದ ವಿಷಯಗಳು.

ಕಲಂ 4(1)ಬಿ(ii)

ಸರ್ಕಾರದ ಕಾರ್ಯದರ್ಶಿಗಳು, ಮೂಲಸೌಲಭ್ಯ ಇಲಾಖೆ

ಇವರು ಮೂಲಸೌಲಭ್ಯ ಇಲಾಖೆಯ ಅಧಿಕೃತ ಮುಖ್ಯಸ್ಥರು, ಇವರಿಗೆ ಇಬ್ಬರು ಉಪಕಾರ್ಯದರ್ಶಿಗಳು, ಇಬ್ಬರು ಅಧೀನ ಕಾರ್ಯದರ್ಶಿಗಳು ನೆರವನ್ನು ನೀಡುತ್ತಾರೆ. ರಾಜ್ಯ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ (ಪಿಪಿಪಿ) ಮುಖ್ಯವಾಹಿನಿಗೆ ತರುವುದಕ್ಕಾಗಿ ಡಿ.ಇ.ಎ. (Department of Economic Affairs) ಕಾರ್ಯಕ್ರಮದ ಅಡಿಯಲ್ಲಿ ಎ.ಡಿ.ಬಿ. (Asian Development Bank) ಯಿಂದ ತಾಂತ್ರಿಕ ನೆರವನ್ನು ಪಡೆದುಕೊಳ್ಳುವುದರೊಂದಿಗೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ವಿಭಾಗವನ್ನು ಸ್ಥಾಪಿಸಲಾಗಿದ್ದು, ಈ ವಿಭಾಗಕ್ಕೆ ಮೂಲಸೌಲಭ್ಯ ಇಲಾಖೆಯ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ ಮತ್ತು ಅವರೊಂದಿಗೆ ಎಡಿಬಿಯ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ(ತಜ್ಞ), ಒಬ್ಬರು ಅಧೀನ ಕಾರ್ಯದರ್ಶಿ ಮತ್ತು ಇಬ್ಬರು ಸಹಾಯಕ ನಿರ್ದೇಶಕರು ಕಾರ್ಯನಿರ್ವಹಿಸುತ್ತಾರೆ. ಇದರಡಿಯಲ್ಲಿ ಈ ಕೆಳಕಂಡ ಅಭಿವೃದ್ಧಿ ಏಜೆನ್ಸಿಗಳು ಕಾರ್ಯನಿ ರ್ವಹಿಸುತ್ತಿವೆ:

(ಎ) ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ(ಕೆಎಸ್ ಐಐಡಿಸಿ)

(ಬಿ) ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ(ಕೆ–ಆರ್‌ಐಡಿಇ)

(ಸಿ) ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತ (ಬಿಎಆರ್‌ಎಲ್)

(ಡಿ)ಮೂಲಸೌಲಭ್ಯ ಅಭಿವೃದ್ಧಿ ನಿಗಮ(ಕರ್ನಾಟಕ)(ಐಡೆಕ್) ನಿಯಮಿತ

(ಇ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ)– ಇದು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಇಲಾಖೆಗೆ ನೆರವು ನೀಡುತ್ತದೆ

(ಎಫ್) ಕರ್ನಾಟಕ ಮೂಲಸೌಲಭ್ಯ ಯೋಜನಾ ಅಭಿವೃದ್ಧಿ ನಿಗಮ(ಕೆಐಪಿಡಿಸಿ) ಮತ್ತು ಕರ್ನಾಟಕ ಗೃಹ ಮಂಡಳಿ(ಕೆಹೆಚ್‌ಬಿ) ಇವುಗಳು ನಿರ್ದಿಷ್ಟ ಯೋಜನಾ ಅಭಿವೃದ್ಧಿಗೆ ನೆರವು ನೀಡುತ್ತದೆ.

ಈ ಇಲಾಖೆಯು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಬಂಧಪಟ್ಟ ಏಜೆನ್ಸಿಗಳು ಆರಂಭಿಸಿದ/ಉದ್ದೇಶಿಸಿದ ಸಾರ್ವಜನಿಕ ಮತ್ತು ಖಾಸಗಿ ಸಹಬಾಗಿತ್ವದ ಅಡಿಯಲ್ಲಿನ ಯೋಜನೆಯನ್ನು ರೂಪಿಸುವುದಕ್ಕಾಗಿ, ಯೋಜನೆಗಳ ಸಂಗ್ರಹಣೆ ಮತ್ತು ಕಾರ್ಯಗತ ಮಾಡುವುದಕ್ಕಾಗಿ ಯುಕ್ತ ಸಲಹಾ ಸೇವಗಳನ್ನು ಒದಗಿಸುವುದು, ಮುಂತಾದ ವಿಷಯಗಳಿಗೆ ಸಂಬಂದಿಸಿದಂತೆ ವ್ಯವಹಾರ ನೀತಿ ನಿಯಮಗಳಿಗೆ ಒಳಪಟ್ಟು ಮತ್ತು ಇಲಾಖೆಯ ಪ್ರಭಾರ ಹೊಂದಿರುವ ಮಾನ್ಯ ಸಚಿವರುಗಳ ಸಾಮಾನ್ಯ ಅಥವಾ ವಿಷಯಕ್ಕೆ ನಿರ್ದೇಶನಗಳನ್ವಯ ಎಲ್ಲಾ ವ್ಯವಹಾರದ ವಿಲೇವಾರಿ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಅಲ್ಲದೆ ತನ್ನ ಅಧೀನ ಸಿಬ್ಬಂದಿಯು ಅವರಿಗೆ ನಿರ್ವಹಿಸಿದ ಕೆಲಸಗಳನ್ನು ಸಮರ್ಥವಾಗಿ ಹಾಗೂ ತ್ವರಿತವಾಗಿ ನಿರ್ವಹಿಸುವಂತೆ ನೋಡಿಕೊಳ್ಳುತ್ತಾರೆ.

<u>ಪತ್ರಾಂಕಿತ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರು:</u>

ಇವರು ಕಾರ್ಯದರ್ಶಿಯವರ ನಿರ್ದೇಶನಗಳಿಗೆ ಒಳಪಟ್ಟು ಕಾರ್ಯನಿರ್ವಹಿಸುತ್ತಾರೆ. ದೂರವಾಣಿ ಕರೆಗಳನ್ನು ಹಾಗೂ ಸಂದರ್ಶಕರನ್ನು ಜಾಣ್ಮೆಯಿಂದ ನಿರ್ವಹಿಸುವುದು. ಅಧಿಕಾರಿ ನೀಡಿದ ಉಕ್ತ ಲೇಖನಗಳ ಚೊಕ್ಕ ಪ್ರತಿಗಳನ್ನು ತಯಾರಿಸುತ್ತಾರೆ.

<u>ಕಿರಿಯ ಸಹಾಯಕರು:–</u>

ನಿಗಧಿಪಡಿಸಿದ ರಿಜಿಸ್ಟರ್‌ಗಳನ್ನು ನಿರ್ವಹಿಸುವುದು ವಿಷಯದ ಕಡತಗಳನ್ನು ದಾಖಲೆಯಿಡುವುದು ಮತ್ತು ರವಾನಿಸುತ್ತಾರೆ.

<u>ವಾಹನ ಚಾಲಕರು:–</u>

ವಾಹನವನ್ನು ಸುಸ್ಥಿತಿಯಲ್ಲಿಟ್ಟು ವಾಹನ ಚಾಲನೆಯ ಕಾರ್ಯ ನಿರ್ವಹಿಸುತ್ತಾರೆ.

ಗ್ರೂಪ್ –ಡಿ

ಶಾಖೆಯನ್ನು ಚೊಕ್ಕಟವಾಗಿಡುವುದು, ಮಾನ್ಯ ಸಚಿವರುಗಳಿಗೆ ಹಾಗೂ ಸಚಿವಾಲಯದೊಳಗಿನ ಇಲಾಖೆಗೆ / ಶಾಖೆಗೆ ಕಡತಗಳನ್ನು/ ಟಪಾಲುಗಳನ್ನು ತೆಗೆದುಕೊಂಡು ಹೋಗುತ್ತಾರೆ.

<u>ಸರ್ಕಾರದ ಉಪ ಕಾರ್ಯದರ್ಶಿ–1:–</u>

ವಿಮಾನ ನಿಲ್ದಾಣ, ಇಳಿದಾಣ ಹಾಗೂ ವಿಮಾನ ಯೋಜನೆಗಳಿಗೆ ಸಂಬಂದಿಸಿದಂತೆ ಪ್ರಕರಣಗಳ ವಿಲೇವಾರಿಗಳಿಗೆ ಕ್ರಮ ಜರುಗಿಸುವುದು ಹಾಗೂ ಪ್ರಮುಖ ವಿಷಯಗಳ ಮೇಲಿನ ಕ್ರಮದ ಬಗ್ಗೆ ಕಾರ್ಯದರ್ಶಿಗಳಿಗೆ ಪ್ರಸ್ತಾವನೆಯನ್ನು ಮಂಡಿಸುವುರೊಂದಿಗೆ ಈ ವಿಷಯಗಳನ್ನು ಹೊಂದಿರುವ ಕಡತಗಳಲ್ಲಿ ನಿರೂಪಿಸುವ, ನಿರ್ಧಾರಗಳನ್ನು ತೆಗೆದುಕೊಳ್ಳುವ ಹೊಣೆಗಾರಿಕೆ, ಕಾರ್ಯದರ್ಶಿ ಇವರುಗಳು ಸೂಕ್ತ ನಿರ್ಣಯ ತೆಗೆದುಕೊಳ್ಳಲು ಅಗತ್ಯ ನೆರವು ನೀಡುವುದು. ಕಾರ್ಯದರ್ಶಿಗಳು ನಿರ್ದಿಷ್ಟವಾಗಿ ವಹಿಸುವಂತಹ ಯಾವುದೇ ಇತರ ಕೆಲಸ ಕಾರ್ಯಗಳಲ್ಲಿ ನಿರ್ಧಾರ, ನೀತಿ, ನಿರೂಪಿಸಲು ಸಹಾಯ ಮಾಡುವುದು.

ಶೀಘ್ರಲಿಪಿಗಾರರು:

ಅಧಿಕಾರಿ ನೀಡಿದ ಉಕ್ತ ಲೇಖನ ಹಾಗೂ ಅದರ ಬೆರಳಚ್ಚು, ಅಧಿಕಾರಿಗೆ ಬರುವ ದೂರವಾಣಿ ಕರೆಗಳನ್ನು ಸ್ವೀಕರಿಸುವುದು ಮತ್ತು ಅಧಿಕಾರಿಗಳು ಆದೇಶಿಸುವ ಇತರೆ ಕೆಲಸಗಳನ್ನು ನಿರ್ವಹಿಸುತ್ತಾರೆ.

ಕಿರಿಯ ಸಹಾಯಕರು:–

ನಿಗಧಿಪಡಿಸಿದ ರಿಜಿಸ್ಟರ್‌ಗಳನ್ನು ನಿರ್ವಹಿಸುವುದು ವಿಷಯದ ಕಡತಗಳನ್ನು ದಾಖಲೆಯಿಡುವುದು ಮತ್ತು ರವಾನಿಸುತ್ತಾರೆ.

ವಾಹನ ಚಾಲಕರು:–

ವಾಹನವನ್ನು ಸುಸ್ಥಿತಿಯಲ್ಲಿಟ್ಟು ವಾಹನ ಚಾಲನೆಯ ಕಾರ್ಯ ನಿರ್ವಹಿಸುತ್ತಾರೆ.

ಗ್ರೂಪ್ –ಡಿ

ಶಾಖೆಯನ್ನು ಚೊಕ್ಕಟವಾಗಿಡುವುದು, ಮಾನ್ಯ ಸಚಿವರುಗಳಿಗೆ ಹಾಗೂ ಸಚಿವಾಲಯದೊಳಗಿನ ಇಲಾಖೆಗೆ / ಶಾಖೆಗೆ ಕಡತಗಳನ್ನು / ಟಪಾಲುಗಳನು ತೆಗೆದುಕೊಂಡು ಹೋಗುತ್ತಾರೆ.

ಸರ್ಕಾರದ ಉಪಕಾರ್ಯದರ್ಶಿ–2

ರೈಲ್ವೆ ಯೋಜನೆಗಳಿಗೆ ಸಂಬಂದಿಸಿದಂತೆ ಪ್ರಕರಣಗಳ ವಿಲೇವಾರಿಗಳಿಗೆ ಕ್ರಮ ಜರುಗಿಸುವುದು ಹಾಗೂ ಪ್ರಮುಖ ವಿಷಯಗಳ ಮೇಲಿನ ಕ್ರಮದ ಬಗ್ಗೆ ಕಾರ್ಯದರ್ಶಿಗಳಿಗೆ ಪ್ರಸ್ತಾವನೆಯನ್ನು ಮಂಡಿಸುವುರೊಂದಿಗೆ ಈ ವಿಷಯಗಳನ್ನು ಹೊಂದಿರುವ ಕಡತಗಳಲ್ಲಿ ನಿರೂಪಿಸುವ, ನಿರ್ಧಾರಗಳನ್ನು ತೆಗೆದುಕೊಳ್ಳುವ ಹೊಣೆಗಾರಿಕೆ, ಕಾರ್ಯದರ್ಶಿ ಇವರುಗಳು ಸೂಕ್ತ ನಿರ್ಣಯ ತೆಗೆದುಕೊಳ್ಳಲು ಅಗತ್ಯ ನೆರವು ನೀಡುವುದು. ಕಾರ್ಯದರ್ಶಿಗಳು ನಿರ್ಧಿಷ್ಟವಾಗಿ ವಹಿಸುವಂತಹ ಯಾವುದೇ ಇತರ ಕೆಲಸ ಕಾರ್ಯಗಳಲ್ಲಿ ನಿರ್ಧಾರ, ನೀತಿ, ನಿರೂಪಿಸಲು ಸಹಾಯ ಮಾಡುವುದು. ಇಲಾಖೆಯ ಸಂಘಟನೆ ಮತ್ತು ವಿಧಾನಗಳ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

ಶೀಘ್ರಲಿಪಿಗಾರರು:

ಅಧಿಕಾರಿ ನೀಡಿದ ಉಕ್ತ ಲೇಖನ ಹಾಗೂ ಅದರ ಬೆರಳಚ್ಚು, ಅಧಿಕಾರಿಗೆ ಬರುವ ದೂರವಾಣಿ ಕರೆಗಳನ್ನು ಸ್ವೀಕರಿಸುವುದು ಮತ್ತು ಅಧಿಕಾರಿಗಳು ಆದೇಶಿಸುವ ಇತರೆ ಕೆಲಸಗಳನ್ನು ನಿರ್ವಹಿಸುತ್ತಾರೆ.

ಕಿರಿಯ ಸಹಾಯಕರು:–

ನಿಗಧಿಪಡಿಸಿದ ರಿಜಿಸ್ಟರ್‌ಗಳನ್ನು ನಿರ್ವಹಿಸುವುದು ವಿಷಯದ ಕಡತಗಳನ್ನು ದಾಖಲೆಯಿಡುವುದು ಮತ್ತು ರವಾನಿಸುವುದು.

ನಿರ್ದೇಶಕರು, ತಾಂತ್ರಿಕ ಕೋಶ:

ಇವರು ತಾಂತ್ರಿಕ ವಿಷಯದಲ್ಲಿ ಹಾಗೂ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ವಿಷಯದಲ್ಲಿ ಕಾರ್ಯದರ್ಶಿಯವರಿಗೆ ನೆರೆವು ನೀಡುವುದು.

ಸರ್ಕಾರದ ಅಧೀನ ಕಾರ್ಯದರ್ಶಿ–1

ಇವರು ಈ ಕೆಳಕಂಡ ವಿಷಯಗಳ ಬಗ್ಗೆ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಎ–ಶಾಖೆ ಮತ್ತು ಬಿ–ಶಾಖೆ ಗಳ ಶಾಖಾಧಿಕಾರಿಗಳಿಂದ ಸ್ವೀಕರಿಸಿದ ಪ್ರಸ್ತಾವನೆಗಳ ಬಗ್ಗೆ ಮಂಡಿಸಿದ ಪ್ರಸ್ತಾವನೆ ಕಡತಗಳನ್ನು ಪರಿಶೀಲಿಸಿ, ಉಪಕಾರ್ಯದರ್ಶಿಯವರಿಗೆ ಮಂಡಿಸುತ್ತಾರೆ.

- ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ ಮತ್ತು ಬಿ.ಐ.ಎ.ಎಲ್ ವಿಷಯಗಳು. ಹೈ – ಸ್ಪೀಡ್ ರೈಲ್ ಲಿಂಕ್ (HSRL) ಹಾಗೂ ಬೆಂಗಳೂರು ಏರ್‌ಪೋರ್ಟ್ ರೈಲ್ ಲಿಂಕ್ (BARL) ಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು, ದೇವನಹಳ್ಳಿ ಬಿಸಿನೆಸ್ ಪಾರ್ಕ್ ಅಭಿವೃದ್ಧಿ, ಟ್ರಂಪೆಟ್ ಇಂಟರ್‌ಚೇಂಜ್ ವಿಷಯ, ದೇವನಹಳ್ಳಿ ಸಮೀಪದ 32.5 ಎಕರೆ ಪ್ರದೇಶದಲ್ಲಿ ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ವಿಷಯಗಳು, ಬಿಐಎಪಿ ಕೋಶಕ್ಕೆ ಸಂಬಂಧಿಸಿದ ವಿಷಯ.
- ವಿಮಾನ ನಿಲ್ದಾಣಕ್ಕೆ ಅಗತ್ಯವಾದ ವಿದ್ಯುತ್ ಸರಬರಾಜು ವಿಷಯ.
- ಇತರೆ ಸಣ್ಣ ವಿಮಾನ ನಿಲ್ದಾಣಗಳು, ವಿಮಾನ ಇಳಿದಾಣಗಳು, ಹೆಲಿಪ್ಯಾಡ್ ನಿರ್ಮಾಣ.
- ಪರ್ಯಾಯ ರಸ್ತೆ ಅಭಿವೃದ್ಧಿ, ನಿರ್ಮಾಣ ಇತ್ಯಾದಿಗೆ ಸಂಬಂಧಿಸಿದ ವಿಷಯಗಳು.

- ಐಡೆಕ್ ಮೂಲಕ ನಿರ್ವಹಿಸಲಾಗುವ ವಿಷಯಗಳು.
- Aviation Turbine Fuel Tax Reimbursement ಗೆ ಸಂಬಂಧಿಸಿದ ವಿಷಯಗಳು.
- ಬಂದರುಗಳು.
- ಮೇಲಿನ ವಿಷಯಕ್ಕೆ ಸಂಬಂಧಪಟ್ಟ ವಿಧಾನ ಮಂಡಲದ/ನ್ಯಾಯಾಲಯದ ಎಲ್ಲಾ ವಿಷಯಗಳು.
- ಇದರೊಂದಿಗೆ ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸಿದ ವಿಷಯಗಳು.
- ಸಚಿವಾಲಯದ ಕೈಪಿಡಿಯಲ್ಲಿ ಸೂಚಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ ಮತ್ತು ಬಿ.ಐ.ಎ.ಎಲ್ ವಿಷಯಗಳು. ಹೈ – ಸ್ಪೀಡ್ ರೈಲ್ ಲಿಂಕ್ (HSRL) ಹಾಗೂ ಬೆಂಗಳೂರು ಏರ್‌ಪೋರ್ಟ್ ರೈಲ್ ಲಿಂಕ್ (BARL) ಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು, ದೇವನಹಳ್ಳಿ ಬಿಸಿನೆಸ್ ಪಾರ್ಕ್ ಅಭಿವೃದ್ಧಿ, ಟ್ರಂಪೆಟ್ ಇಂಟರ್‌ಚೇಂಜ್ ವಿಷಯ, ದೇವನಹಳ್ಳಿ ಸಮೀಪದ 32.5 ಎಕರೆ ಪ್ರದೇಶದಲ್ಲಿ ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ವಿಷಯಗಳು, ಬಿಐಎಪಿ ಕೋಶಕ್ಕೆ ಸಂಬಂಧಿಸಿದ ವಿಷಯ.
- ವಿಮಾನ ನಿಲ್ದಾಣಕ್ಕೆ ಅಗತ್ಯವಾದ ವಿದ್ಯುತ್ ಸರಬರಾಜು ವಿಷಯ.
- ಇತರೆ ಸಣ್ಣ ವಿಮಾನ ನಿಲ್ದಾಣಗಳು, ವಿಮಾನ ಇಳಿದಾಣಗಳು, ಹೆಲಿಪ್ಯಾಡ್ ನಿರ್ಮಾಣ.
- ಪರ್ಯಾಯ ರಸ್ತೆ ಅಭಿವೃದ್ಧಿ, ನಿರ್ಮಾಣ ಇತ್ಯಾದಿಗೆ ಸಂಬಂಧಿಸಿದ ವಿಷಯಗಳು.
- ಐಡೆಕ್ ಮೂಲಕ ನಿರ್ವಹಿಸಲಾಗುವ ವಿಷಯಗಳು.
- Aviation Turbine Fuel Tax Reimbursement ಗೆ ಸಂಬಂಧಿಸಿದ ವಿಷಯಗಳು.
- ಬಂದರುಗಳು.
- ಮೇಲಿನ ವಿಷಯಕ್ಕೆ ಸಂಬಂಧಪಟ್ಟ ವಿಧಾನ ಮಂಡಲದ/ನ್ಯಾಯಾಲಯದ ಎಲ್ಲಾ ವಿಷಯಗಳು.
- ಇದರೊಂದಿಗೆ ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸಿದ ವಿಷಯಗಳು.
- ಸಚಿವಾಲಯದ ಕೈಪಿಡಿಯಲ್ಲಿ ಸೂಚಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು.

<u>ಸರ್ಕಾರದ ಅಧೀನ ಕಾರ್ಯದರ್ಶಿ–</u>2

- ಮೇಲಿನ ಎರಡೂ ಶಾಖೆಗಳಿಗೂ ಹಂಚಿಕೆಯಾಗದೇ ಇರುವ ಎಲ್ಲಾ ವಿಷಯಗಳು.
- ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವ ಇತರೆ ಸಾಮಾನ್ಯ ವಿಷಯಗಳು.
- ಯೋಜನಾ ಪ್ರಗತಿ ಹಾಗೂ ಇಲಾಖೆಯ ಯೋಜನೆಗಳಿಗೆ ಕಾಲ ಕಾಲಕ್ಕೆ ಬಿಡುಗಡೆ ಮಾಡಲಾಗುವ ಅನುದಾನ, ಅದರ ಉಪಯೋಗ, ಯೋಜನೆಯ ಭೌತಿಕ ಪ್ರಗತಿ ಇತ್ಯಾದಿ ಕುರಿತಂತೆ ಯೋಜನಾ ಇಲಾಖೆ / ಆರ್ಥಿಕ ಇಲಾಖೆ / ಮಹಾ ಲೇಖಪಾಲರು / ಖಜಾನೆ ಇಲಾಖೆಗೆ ಕಾಲ ಕಾಲಕ್ಕೆ ನೀಡಬೇಕಾದ ಮಾಹಿತಿಯ ಸಮನ್ವಯ ಹಾಗೂ ಕ್ರೋಢೀಕರಣ.
- MMR / KDP ಸಭೆಗಳಿಗೆ ಒದಗಿಸಬಹುದಾದ ಮಾಹಿತಿಯ ಕ್ರೋಢೀಕರಣ ಹಾಗೂ ವಿವರಗಳನ್ನು MPIC ನಮೂನೆಯಲ್ಲಿ ಪಡೆದು ಒದಗಿಸುವುದು.
- ಮೂಲಸೌಲಭ್ಯ ಅಭಿವೃದ್ಧಿ ನೀತಿ ಮತ್ತು ಈ ನೀತಿಯ ಪ್ರಕಾರ ನೀಡಬಹುದಾದ ಉತ್ತೇಜನಗಳು ಮತ್ತು ರಿಯಾಯ್ತಿಗಳು.
- ಮೇಲಿನ ವಿಷಯಕ್ಕೆ ಸಂಬಂಧಪಟ್ಟ ವಿಧಾನ ಮಂಡಲದ / ನ್ಯಾಯಾಲಯದ ಎಲ್ಲಾ ವಿಷಯಗಳು
- ಇದರೊಂದಿಗೆ ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸಿದ ವಿಷಯಗಳು.
- ಸಚಿವಾಲಯದ ಕೈಪಿಡಿಯಲ್ಲಿ ಸೂಚಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು.
- KRDCL, KTPO ನಲ್ಲಿ ಪ್ರ.ಕಾ.ರವರು ನಿರ್ದೇಶಕರಾಗಿರುವ ವಿಷಯಗಳ ನಿರ್ವಹಣೆ.

ಇವರು ಈ ಕೆಳಕಂಡ ವಿಷಯಗಳ ಬಗ್ಗೆ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಸಿ–ಶಾಖೆ ಮತ್ತು ಡಿ–ಶಾಖೆಗಳ ಶಾಖಾಧಿಕಾರಿಗಳಿಂದ ಸ್ವೀಕರಿಸಿದ ಪ್ರಸ್ತಾವನೆಗಳ ಬಗ್ಗೆ ಮಂಡಿಸಿದ ಪ್ರಸ್ತಾವನೆ ಕಡತಗಳನ್ನು ಪರಿಶೀಲಿಸಿ, ಉಪಕಾರ್ಯದರ್ಶಿಯವರಿಗೆ ಮಂಡಿಸುತ್ತಾರೆ.

<u>ಶಾಖಾಧಿಕಾರಿ–ಎ:</u> ಇವರು ಶಾಖೆಯ ಮೇಲ್ವಿಚಾರಕರಾಗಿದ್ದು ವಿಮಾನ ಯೋಜನೆಗಳಿಗೆ ಸಂಬಂದಿಸಿದಂತೆ ಸ್ವೀಕರಿಸಿದ ಪ್ರಸ್ತಾವನೆಗಳನ್ನು / ಕಡತಗಳನ್ನು ಪರಿಶೀಲಿಸಿ ಅಧೀನ ಕಾರ್ಯದರ್ಶಿಯವರಿಗೆ ಮಂಡಿಸುವುದು ಹಾಗೂ ಶಾಖೆಯನ್ನು ಸುವ್ಯವಸ್ಥಿತವಾಗಿ ನಿರ್ವಹಿಸುತ್ತಾ, ಕಿರಿಯ ಸಹಾಯಕರು ಶಾಖೆಯ ವಿಷಯದ ಕಡತಗಳನ್ನು ದಾಖಲಿಸುವ ಮತ್ತು ರವಾನಿಸುವ ಕಾರ್ಯದ ಮೇಲ್ವಿಚಾರಣೆ ಕೈಗೊಳ್ಳುತ್ತಾರೆ. ಇವರು ಮಾಹಿತಿ ಹಕ್ಕು ಅಧಿನಿಯಮ 2005 ರನ್ವಯ ಸಹಾಯಕ ಮಾಹಿತಿ ಅಧಿಕಾರಿಯಾಗಿರುತ್ತಾರೆ.

ಶಾಖಾಧಿಕಾರಿ–ಬಿ: ಇವರು ಶಾಖೆಯ ಮೇಲ್ವಿಚಾರಕರಾಗಿದ್ದು, ರೈಲ್ವೆ ಯೋಜನೆಗಳಿಗೆ ಸಂಬಂದಿಸಿದಂತೆ ಸ್ವೀಕರಿಸಿದ ಪ್ರಸ್ತಾವನೆಗಳನ್ನು / ಕಡತಗಳನ್ನು ಪರಿಶೀಲಿಸಿ ಅಧೀನ ಕಾರ್ಯದರ್ಶಿಯವರಿಗೆ ಮಂಡಿಸುವುದು ಹಾಗೂ ಶಾಖೆಯನ್ನು ಸುವ್ಯವಸ್ಥಿತವಾಗಿ ನಿರ್ವಹಿಸುತ್ತಾ, ಕಿರಿಯ ಸಹಾಯಕರು ಶಾಖೆಯ ವಿಷಯದ ಕಡತಗಳನ್ನು ದಾಖಲಿಸುವ ಮತ್ತು ರವಾನಿಸುವ ಕಾರ್ಯದ ಮೇಲ್ವಿಚಾರಣೆ ಕೈಗೊಳ್ಳುತ್ತಾರೆ

ಶಾಖಾಧಿಕಾರಿ–ಸಿ: ಇವರು ಶಾಖೆಯ ಮೇಲ್ವಿಚಾರಕರಾಗಿದ್ದು, ಮಹಾಲೇಖಪಾಲರಿಂದ ಸ್ವೀಕೃತವಾಗುವ ಲೆಕ್ಕಹೊಂದಾಣಿಕೆ ಕುರಿತು, ಆರ್.ಎಫ್.ಡಿ ಮತ್ತು ಸಿಟಿಜನ್ ಚಾರ್ಟರ್, , ಎಂ.ಎಂ.ಆರ್. ಸಭೆ, ಯೋಜನೆ ಇಲಾಖೆಗೆ/ ಆರ್ಥಿಕ ಇಲಾಖೆಗೆ ಸಂಬಂಧಿಸಿದ ಮಾಹಿತಿ ನೀಡುವ, ಅನಿಲ ಕೊಳವೆ ಮಾರ್ಗ. ಸಿಟಿ ಗ್ಯಾಸ್ ಯೋಜನೆಗೆ ಸಂಬಂದಿಸಿದಂತೆ ಶಾಖೆಗೆ ಸಂಬಂದಿಸಿದಂತೆ ಸ್ವೀಕರಿಸಿದ ಪ್ರಸ್ತಾವನೆಗಳನ್ನು / ಕಡತಗಳನ್ನು ಪರಿಶೀಲಿಸಿ ಅಧೀನ ಕಾರ್ಯದರ್ಶಿಯವರಿಗೆ ಮಂಡಿಸುವುದು ಹಾಗೂ ಶಾಖೆಯನ್ನು ಸುವ್ಯವಸ್ಥಿತವಾಗಿ ನಿರ್ವಹಿಸುತ್ತಾ, ಕಿರಿಯ ಸಹಾಯಕರು ಶಾಖೆಯ ವಿಷಯದ ಕಡತಗಳನ್ನು ದಾಖಲಿಸುವ ಮತ್ತು ರವಾನಿಸುವ ಕಾರ್ಯದ ಮೇಲ್ವಿಚಾರಣೆ ಕೈಗೊಳ್ಳುತ್ತಾರೆ.

ಶಾಖಾಧಿಕಾರಿ–ಡಿ: ಇವರು ಶಾಖೆಯ ಮೇಲ್ವಿಚಾರಕರಾಗಿದ್ದು, ಸ್ವೀಕೃತಿ ಮತ್ತು ರವಾನೆ ಸಂಬಂದಿಸಿದಂತೆ ವಿಧಾನ ಮಂಡಲ, ಮಾಹಿತಿ ಹಕ್ಕು ಅಧಿನಿಯಮ, ಇತರೆ ವಿಷಯಗಳಿಗೆ ಸಂಬಂದಿಸಿದಂತೆ ಸ್ವೀಕರಿಸಿದ ಪ್ರಸ್ತಾವನೆಗಳನ್ನು / ಕಡತಗಳನ್ನು ಪರಿಶೀಲಿಸಿ ಅಧೀನ ಕಾರ್ಯದರ್ಶಿಯವರಿಗೆ ಮಂಡಿಸುವುದು ಹಾಗೂ ಶಾಖೆಯನ್ನು ಸುವ್ಯವಸ್ಥಿತವಾಗಿ ನಿರ್ವಹಿಸುತ್ತಾ, ಕಿರಿಯ ಸಹಾಯಕರು ಶಾಖೆಯ ವಿಷಯದ ಕಡತಗಳನ್ನು ದಾಖಲಿಸುವ ಮತ್ತು ರವಾನಿಸುವ ಕಾರ್ಯದ ಮೇಲ್ವಿಚಾರಣೆ ಕೈಗೊಳ್ಳುತ್ತಾರೆ

ವಿಷಯ ನಿರ್ವಾಹಕರು: ಓರ್ವ ಹಿರಿಯ ಸಹಾಯಕ ನೇರ ಶಾಖಾಧಿಕಾರಿಯವರಿಗೆ ಹೊಂದಿಕೊಂಡಿರುತ್ತಾರೆ. ಓರ್ವ ಸಹಾಯಕ ಶಾಖಾಧಿಕಾರಿ–ಬಿ ಇವರಿಗೆ ಹೊಂದಿಕೊಂಡಿರುತ್ತಾರೆ. ಇವರು ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಚಿವಾಲಯ ಕೈಪಿಡಿಯಲ್ಲಿ ಸೂಚಿಸಿರುವಂತೆ ಕರ್ತವ್ಯವನ್ನು ನಿರ್ವಹಿಸುವರು.

ಕಿರಿಯ ಸಹಾಯಕರು: ಪ್ರತಿಯೊಂದು ಶಾಖೆಯಲ್ಲಿ/ಆಪ್ತಶಾಖೆಯಲ್ಲಿ ಅಂದರೆ ಕಾರ್ಯದರ್ಶಿ/ ಉಪಕಾರ್ಯದರ್ಶಿ ನಿರ್ದೇಶಕರು ಒಬ್ಬರಂತೆ ಕಿರಿಯ ಸಹಾಯಕ ಪತ್ರ/ಕಡತ ಸ್ವೀಕರಿಸುವುದು, ನಿಗಧಿಪಡಿಸಿರುವ ರಿಜಿಸ್ಟರನ್ನು ನಿರ್ವಹಿಸುವುದು, ಕಡತಗಳನ್ನು ದಾಖಲೆ ಇಡುವುದು ಮತ್ತು ರವಾನಿಸುವುದು.

ದಲಾಯತ್: ಶಾಖೆಯಲ್ಲಿ ಅವರಿಗೆ ವಹಿಸಿದ ಕೆಲಸಗಳನ್ನು ಆಯಾಯ ದಿನವೇ ಮುಗಿಸಬೇಕಾಗಿರುತ್ತದೆ.

4(1)(ಬಿ)iii– ತೀರ್ಮಾನ ತೆಗೆದುಕೊಳ್ಳುವಲ್ಲಿ ಅನುಸರಿಸಲಾಗುವ ಕ್ರಮಗಳು:

ಇಲಾಖೆಗೆ ಪ್ರಸ್ತಾವನೆ ಸ್ವೀಕೃತವಾದೊಡನೆ ಸಹಾಯಕರು / ಹಿರಿಯಸಹಾಯಕರು ಹೊಸ ಕಡತಗಳನ್ನು ತೆರೆದು ಅಥವಾ ವಿಷಯದ ಬಗ್ಗೆ ಲಭ್ಯವಿದ್ದ ಹಿಂದಿನ ಕಡತದಲ್ಲಿ ಅವುಗಳ ಪ್ರಾಮುಖ್ಯತೆ ತಕ್ಕಂತೆ ಸಂಬಂಧಪಟ್ಟ ನಿಯಮಗಳ ಅಡಿಯಲ್ಲಿ ಟಿಪ್ಪಣಿಯನ್ನು ಪ್ರಾರಂಭಿಸುತ್ತಾರೆ. ಸಹಾಯಕರು / ಹಿರಿಯ ಸಹಾಯಕರು ಸಲ್ಲಿಸಿದ ಟಿಪ್ಪಣಿಗಳನ್ನು ಶಾಖಾಧಿಕಾರಿಯವರು ಪರಿಶೀಲಿಸಿ, ಆಧೀನ ಕಾರ್ಯದರ್ಶಿಯವರಿಗೆ ಮಂಡಿಸುತ್ತಾರೆ. ಆಧೀನ ಕಾರ್ಯದರ್ಶಿಯವರು ವಿಷಯಗಳ ಪ್ರಾಮುಖ್ಯತೆಗೆ ತಕ್ಕಂತೆ ಸಂಬಂಧಪಟ್ಟ ನಿಯಮಗಳಡಿಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಮುಂದಿನ ಕ್ರಮ ಜರುಗಿಸಲು ಸಾಧ್ಯವಿದ್ದಲ್ಲಿ ತಮ್ಮ ಹಂತದಲ್ಲಿಯೇ ಜರುಗಿಸುತ್ತಾರೆ. ಆಥವಾ ಮುಂದಿನ ಆದೇಶಕ್ಕಾಗಿ ಉಪ ಕಾರ್ಯದರ್ಶಿಯವರಿಗೆ ಕಡತವನ್ನು ಮಂಡಿಸುತ್ತಾರೆ. ಉಪ ಕಾರ್ಯದರ್ಶಿಯವರು ಅಧೀನ ಕಾರ್ಯದರ್ಶಿಯವರಿಂದ ಸಲ್ಲಿಸಲ್ಪಟ್ಟ ಕಡತಗಳನ್ನು ಸಮಗ್ರವಾಗಿ ಪರಿಶೀಲಿಸಿ, ಮುಂದಿನ ಆದೇಶಕ್ಕಾಗಿ ಕಾರ್ಯದರ್ಶಿಯವರಿಗೆ ಕಡತವನ್ನು ಮಂಡಿಸುತ್ತಾರೆ. ಅಥವಾ ತಮ್ಮ ಹಂತದಲ್ಲಿಯೇ ಕ್ರಮ ಜರುಗಿಸಲು ಸಾಧ್ಯವಿದ್ದಲ್ಲಿ ಕ್ರಮ ಜರುಗಿಸುತ್ತಾರೆ. ಕಾರ್ಯದರ್ಶಿಯವರು ಕೆಲವು ಪ್ರಸ್ತಾವಗಳಿಗೆ ಸಂಬಂಧಿಸಿದಂತೆ ಅವುಗಳ ವಿಶಿಷ್ಟತೆಯನ್ವಯ ಕಾರ್ಯನೀತಿ ನಿರ್ಣಯ ಕೈಗೊಳ್ಳುತ್ತಾರೆ. ಅಥವಾ ಅಗತ್ಯವಿದ್ದಲ್ಲಿ ಕಡತವನ್ನು ಸಂಬಂಧಪಟ್ಟ ಮಾನ್ಯ ಸಚಿವರುಗಳಿಗೆ ಸಲ್ಲಿಸುತ್ತಾರೆ.

4(1)(ಬಿ) (iv)

ಸರ್ಕಾರದ ಕಾರ್ಯದರ್ಶಿಗಳು ಸರ್ಕಾರದ ಉಪಕಾರ್ಯದರ್ಶಿಗಳು ಅಧೀನ ಕಾರ್ಯದರ್ಶಿಗಳು ಶಾಖಾಧಿಕಾರಿಗಳು	ಪ್ರಕರಣಗಳ ಬಗ್ಗೆ ಆದ್ಯತೆಯ ಮೇಲೆ ಹಾಗೂ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.
ಸಹಾಯಕರು / ಹಿರಿಯ ಸಹಾಯಕರು	ಕಡತಗಳನ್ನು / ಸ್ವೀಕೃತಿಗಳನ್ನು 5 ದಿನದೊಳಗಾಗಿ ನಿರ್ವಹಿಸಬೇಕಾಗಿರುತ್ತದೆ.
ಶೀಘ್ರಲಿಪಿಗಾರರು/ಬೆರಳಚ್ಚುಗಾರರು ಕಿರಿಯ ಸಹಾಯಕರು	ಇವರು ತಮಗೆ ವಹಿಸಿದ ಎಲ್ಲಾ ಕರ್ತವ್ಯಗಳನ್ನು ಆಯಾಯ ದಿನವೇ ಮುಗಿಸಬೇಕಾಗಿರುತ್ತದೆ.
ವಾಹನ ಚಾಲಕರು	ವಾಹನವನ್ನು ಸಿದ್ಧತೆಯಲ್ಲಿಡಬೇಕಾಗಿರುತ್ತದೆ.
ದಲಾಯತ್	ಶಾಖೆಯಲ್ಲಿ ಅವರಿಗೆ ವಹಿಸಿದ ಕೆಲಸಗಳನ್ನು ಆಯಾಯ ದಿನವೇ ಮುಗಿಸಬೇಕಾಗಿರುತ್ತದೆ.

4(1)(ಬಿ) (v)

1) ಕರ್ನಾಟಕ ನಾಗರೀಕ ಸೇವಾ ನಿಯಮಗಳು
2) ಕರ್ನಾಟಕ ನಾಗರೀಕ ಸೇವಾ (ವ.ನಿ ಮತ್ತು ಮೇಲ್ಮನವಿ) ನಿಯಮಗಳು,
3) ಮೂಲಸೌಲಭ್ಯ ನೀತಿ 2007
4) ಸಚಿವಾಲಯ ಕೈಪಿಡಿ
5) ಕರ್ನಾಟಕ ಆರ್ಥಿಕ ಸಂಹಿತೆ
6) ಕರ್ನಾಟಕ ಖಜಾನೆ ಸಂಹಿತೆ
7) ಕರ್ನಾಟಕ ಸರ್ಕಾರ (ಕಾರ್ಯ ಕಲಾಪಗಳ ನಿರ್ವಹಣೆ) ನಿಯಮಗಳು 1977

4(1)(ಬಿ) vi)

<u>ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಎ ಶಾಖೆ :</u>

ಎ :	ರಾಅವಿ	DIA	ವಿಮಾನ ನಿಲ್ದಾನ/ಇಳಿದಾಣ ಎಲ್ಲ ವಿಷಯ

<u>ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಬಿ ಶಾಖೆ – ಃ</u>

ಬಿ ಃ	ರಾರಾಹೆ	NSW	ರೈಲ್ವೆ ಯೋಜನೆಗಳು ಎಲ್ಲ ವಿಷಯ

<u>ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಸಿ ಶಾಖೆ</u>

ಸಿ :	ಮೂಇವಿ	UIP IDM	ಮೂಲಸೌಲಭ್ಯ ನೀತಿಯಡಿ ಬರುವ ಯೋಜನೆಗಳಿಗೆ ಉತ್ತೇಜನ ಮತ್ತು ರಿಯಾಯ್ತಿಗಳು, ದಾಬೋಲ್ – ಬೆಂಗಳೂರು ಅನಿಲ ಕೊಳವೆ ಮಾರ್ಗ ಯೋಜನೆ ಆರ್‌ಎಫ್‌ಡಿ, ಸಿಟಿಜನ್ ಚಾರ್ಟರ್, MMR, KDP, SCP/TSCP, ಯೋಜನೆ/ಆರ್ಥಿಕ ಇಲಾಖೆಗೆ ಸಂಬಂಧಿಸಿದ ಮಾಹಿತಿ, ಸ್ವತಂತ್ರ ಮೌಲ್ಯಮಾಪನ, ಮಹಾಲೇಖಾಪಾಲರಿಂದ ಬರುವ ಲೆಕ್ಕಹೊಂದಾಣಿ,

<u>ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಡಿ ಶಾಖೆ</u>

ಡಿ	ಮೂಇವಿ	IDM	ಸ್ವೀಕೃತಿ ಮತ್ತು ರವಾನೆಗೆ ಸಂಬಂಧಿಸಿದ ಎಲ್ಲ ವಿಷಯಗಳು . ಸಚಿವಾಲಯದ ಕೈಪಿಡಿಯಲ್ಲಿ ನಿಗಧಿಪಡಿಸಿದ ಕ್ರೋಡಿಕರಣ ವಿಷಯಗಳು ಸಚಿವಾಲಯ ಮಟ್ಟದ ಅಂತರ್ ಶಾಖೆ ಕ್ರೋಢಿಕರಣಕ್ಕೆ ಸಂಭಂಧಿಸಿದ ವಿಷಯಗಳು . ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವ ಇತರೆ ಸಾಮಾನ್ಯ ವಿಷಯಗಳು. ಸಚಿವಾಲಯದ ಕೈಪಿಡಿಯಲ್ಲಿ ಸೂಚಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು. ಕೆ.ಆರ್.ಡಿ.ಸಿ.ಎಲ್., ಕೆ.ಟಿ.ಪಿ.ಓ.ನಲ್ಲಿ ಪ್ರ.ಕಾ.ರವರು ನಿರ್ದೇಶಕರಾಗಿರುವ ವಿಷಯಗಳ ನಿರ್ವಹಣೆ. ಇಲಾಖೆಯ ಸಮನ್ವಯ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ ವಿಷಯಗಳು ಹಾಗೂ ಸಹಾಯಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಣೆ. ವಿಧಾನ ಮಂಡಲದ ವಿಷಯಗಳ ಸಮನ್ವಯ ವಾರ್ಷಿಕ ವರದಿ/ ಕಾರ್ಯನಿರ್ವಹಣಾ ವರದಿ ಇತ್ಯಾದಿ. ಇದರೊಂದಿಗೆ ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸಿದ ವಿಷಯಗಳು.

4(1)(ಬಿ) (vii)

ಮೇಲಿನ 4 (1) (ಬಿ) (i)ರಲ್ಲಿ ನೀಡಿರುವಂತೆ

4(1)(ಬಿ) (viii)

ಈ ಇಲಾಖೆಯಡಿಯಲ್ಲಿ ಯಾವುದೇ ನಿಗಮ / ಮಂಡಳಿಗಳಿರುವುದಿಲ್ಲ.

4(1) (ಬಿ) (ix) – ಉದ್ಭವಿಸುವುದಿಲ್ಲ

4(1) (ಬಿ) (x)

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಅಧಿಕಾರಿ/ನೌಕರರ ವಿವರಗಳು ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ಹೆಸರು ಮತ್ತು ಪದನಾಮ	ದೂರವಾಣಿ ಸಂಖ್ಯೆ	ಮೂಲ ವೇತನ
1.	ಡಾ॥ ರಾಜ್ ಕುಮಾರ್ ಖತ್ರಿ, ಕಾರ್ಯದರ್ಶಿ.	22282366 (O) 2203 5085 Fax No. 22280605	56,960/–
2.	ಶ್ರೀಮತಿ. ಎನ್. ಮಂಜುಳಗೀತ, ಉಪ ಕಾರ್ಯದರ್ಶಿ–1	2203 4129 2225 2736	22,125/–
3.	ಶ್ರೀ ಕೆ.ವಿ. ರಾಮ, ಉಪ ಕಾರ್ಯದರ್ಶಿ–2	2203 4768 2234 1657	20,025/–
4.	ಶ್ರೀ ರಮೇಶ್ ಆರ್, ನಿರ್ದೇಶಕರು (ತಾಂತ್ರಿಕ ಕೋಶ)	2203 4069 2203 4070	26,250/–
5.	ಶ್ರೀ. ಎಸ್. ಜೆ. ಸಂಪತ್ ಕುಮಾರ್, ಅಧೀನ ಕಾರ್ಯದರ್ಶಿ–1	2203 4130	16,000/–
6.	ಶ್ರೀ ಆರ್. ಶಿವಲಿಂಗಯ್ಯ ಅಧೀನ ಕಾರ್ಯದರ್ಶಿ–2	22034063	16,400/–
7.	ಶ್ರೀ ಮಂಜುನಾಥ. ಹೆಚ್, ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ	2228 2366	20,550/–
8.	ಶ್ರೀ ಶ್ರೀನಿವಾಸ್, ವಿಶೇಷ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ	2228 4229	23,850/–
9.	ಶ್ರೀ. ರಾಬಿನ್ ವನರಾಜ್. ಜೆ., ಶಾಖಾಧಿಕಾರಿ–I	2203 4145	13,350/–
10.	ಶ್ರೀ ಸಿದ್ರಾಮಪ್ಪ ಹ.ತಳವಾರ ಶಾಖಾಧಿಕಾರಿ–II	22034129	16,800/–
11.	ಕುಮಾರಿ. ಶಕುಂತಲಾ ಚೌಗಲಾ ಶಾಖಾಧಿಕಾರಿ–III	22034151	11,700/–
12.	ಶ್ರೀಮತಿ ವಿ. ರತ್ನಮ್ಮ ಶಾಖಾಧಿಕಾರಿ–IV	22034127	13,350/–
13.	ಹಿರಿಯ ಸಹಾಯಕ	ಹುದ್ದೆ ಖಾಲಿ	–

ಕ್ರಮ ಸಂಖ್ಯೆ	ಹೆಸರು ಮತ್ತು ಪದನಾಮ	ದೂರವಾಣಿ ಸಂಖ್ಯೆ	ಮೂಲ ವೇತನ
14.	ಶ್ರೀ. ಲಕ್ಷ್ಮೀ ನಾರಾಯಣ ಹೆಚ್. ಹಿರಿಯ ಸಹಾಯಕ	–	13,350/–
15.	ಶ್ರೀಮತಿ ಕುಸುಮ. ಎಂ., ಶೀಘ್ರಲಿಪಿಗಾರ್ತಿ	–	9,275/–
16.	ಶ್ರೀಮತಿ ದೀಪಶ್ರೀ. ಬಿ. ಎನ್., ಶೀಘ್ರಲಿಪಿಗಾರ್ತಿ	–	8,400/–
17.	ಶ್ರೀಮತಿ ಕೆ.ಆರ್. ಸುಮತಿ ಶೀಘ್ರಲಿಪಿಗಾರ್ತಿ	–	10,500/–
18.	ಶ್ರೀಮತಿ ಎಸ್. ಸುಗುಣ, ಶೀಘ್ರಲಿಪಿಗಾರ್ತಿ	–	9,275/–
19.	ಶ್ರೀಮತಿ ವಾಣಿ, ಶೀಘ್ರಲಿಪಿಗಾರ್ತಿ	–	8,825/–
20.	ಶ್ರೀಮತಿ ಗೀತ, ಶೀಘ್ರಲಿಪಿಗಾರ್ತಿ	–	12,000/–
21.	ಶ್ರೀ ರವಿ ಜಿ. ಆರ್., ಸಹಾಯಕ.	–	8,000/–
22.	ಶ್ರೀ ಸಿದ್ದಿಕ್ ಪಾಷಾ ಸಹಾಯಕ	–	8,400/–
23.	ಕುಮಾರಿ ಪಾವನ ಶ್ರೀ ಸಹಾಯಕಿ	–	8,000/–
24.	ಶ್ರೀ ಎಸ್. ಬಸವರಾಜು, ಕಿರಿಯ ಸಹಾಯಕ.	–	6,650/–
25.	ಕಿರಿಯ ಸಹಾಯಕ	ಹುದ್ದೆ ಖಾಲಿ	–
26.	ಶ್ರೀ ಚನ್ನಯ್ಯ ಬಿ.ಟಿ., ಕಿರಿಯ ಸಹಾಯಕ.	–	8,000/–
27.	ಶ್ರೀ ಚಂದ್ರಾನಾಯಕ್, ದಲಾಯತ್.	–	7,100/–
28.	ಶ್ರೀ ನರಸಿಂಹ ಮೂರ್ತಿ. ಎಂ, ದಲಾಯತ್.	–	5,500/–
29.	ಶ್ರೀ ಕೃಷ್ಣನ್ ಕೆ. ಆರ್. ವಾಹನ ಚಾಲಕ.	–	8,825/–
30.	ವಿಲಿಯಮ್ಸ್, ವಾಹನ ಚಾಲಕ	–	9,275/–
31.	ವನಲಕ್ಷ್ಮಿ, ಶೀಘ್ರಲಿಪಿಗಾರ್ತಿ	–	9,275/–
32.	ಶಿವಕುಮಾರ್ ಎಂ. ಪಿ., ವಾಹನ ಚಾಲಕ	–	11,100/–

4(1)(ಬಿ) **(xi)**

2010–11ನೇ ಸಾಲಿನ ಮೂಲಸೌಲಭ್ಯ ಇಲಾಖೆಯ ಆಯವ್ಯಯ ವಿವರ:

Budget Allocation during the year 2011-12

INFRASTRUCTURE DEVELOPMENT DEPARTMENT

(Rs.in lakhs)

Sl. No.	Nomenclature of the Scheme	Budget provision during 2011-12
	Airport Projects:-	
1	5465-01-190-1-04-240 BIAP-Assistance for repayment of HUDCO loan.	1463.00
2 a)	5465-01-190-1-05-211- Development of Minor Airports Investments.	8000.00
2 b)	5465-01-190-1-05-133- Special Development Plan.	4000.00
3	5465-01-190-2-01 Investment in BIAL through KSIIDC	10.00
4	5465-01-190-2-02- BIAL State Support to Project	-
5	5465-01-190-2-03 KSIIDC-BIAP cell-211 - Investments	25.00
6	5465-01-190-2-04-211 Providing power at the airport near BIAP site.	1.00
7 a)	5465-01-190-2-05-211 Alternate Roads Investment.	1000.00
7 b)	5465-01-190-2-05-422 - Special Component Plan	350.00
7 c)	5465-01-190-2-05-423 - Tribal Sub Plan	150.00
8	5465-01-190-2-06 Land acquisition for Trumpet Interchange investments	-
9	5465-01-190-2-07-051-Development of 408 acres of Govt. land adjacent to BIAP.	100.00
10	5465-01-190-2-11- Aviation Turbine Fuel - Tax Reimbursement Investment	1.00
11	5465-01-190-3-06-211 Rail link to New Airport.	7570.00
	Total (Airports)	**22670.00**
	Railway Projects:-	
12	5465-01-190-3-01- KRIDE-Investment	1.00
13	5465-01-190-3-02-Hassan-Mangalore guage conversion project-Investments	100.00
14	5465-01-190-3-03-Sholapur-Gadag guage conversion project-Ivestments.	500.00
15	5465-01-190-3-04-211-K-RIDE - RoB/ RuB project investment fund.	2149.00
16 a)	5465-01-190-3-05-211 New Cost Sharing project-Investments.	25652.00
16 b)	5465-01-190-3-05-133 Special Development Plan	10000.00

16 c)	5465-01-190-3-05-422 - Special Component Plan	2000.00
16 d)	5465-01-190-3-05-423 - Tribal Sub Plan	1000.00
17	5465-01-190-3-07- 211 Commuter Rail Service for Banglore.	500.00
18	5465-01-190-3-08-Cost sharing Ramanagaram-Mysore Railway Doubling-Other expenditure.	2500.00
19	5465-01-1-190-3-09-Land for railway cargo complex at Hubli	1.00
20 a)	5465-01-190-3-10-133-Cost sharing-Bidar - Gulbarga New Railway line - SDP.	3909.56
20 b)	5465-01-190-3-10-422 - Special Component Plan	300.00
20 c)	5465-01-190-3-10-423 - Tribal Sub Plan	150.00
21	5465-01-190-1-11-Hubli Ankola Railway project.	1.00
	Total (Railways)	**48763.56**
	Others:-	
22	5465-01-190-1-01-211- iDeCK - Investments.	200.00
23	5465-01-190-1-15-Karnataka Infrastructure Project Development Fund Capital Expenses	1000.00
24	5465-01-190-1-16-Gas Pipe Line project	25.00
25	5465-01-190-1-17- City Gas Distribution project	416.44
26	5465-01-190-1-18- Tadadi Sea Port Project	500.00
27	5465-01-190-1-19- Vijayanagar Area Development Authority (VADA) Investment	50.00
28	5465-01-190-1-20- Karnataka Viability Gap Investment	1000.00
29	5465-01-190-1-21- Equity for PPP Project	1000.00
	Total (others)	**4191.44**
	Provision under Grant Head	
30	3451-00-090-1-06-059-Infrastructure Preliminary Studies Other Expenditure	300.00
31	3451-00-090-1-06-125 - Infrastructure Preliminary Studies - Modernisation	100.00
	Total (Provision under Grant Head)	**400.00**
	Grand Total	**76025.00**

4(1)(ಬಿ) **(xii) –** ಅನ್ವಯಿಸುವುದಿಲ್ಲ.

4(1)(ಬಿ) **(xiii) –** ಉದ್ಭವಿಸುವುದಿಲ್ಲ.

4(1)(ಬಿ) **(xiv)**

ಈ ಬಗ್ಗೆ ಮಾಹಿತಿಯನ್ನು ಅಂತರ್ಜಾಲದಲ್ಲಿ ಅಳವಡಿಸಲಾಗಿದೆ.

4(1)(ಬಿ) **(xv)**

ಈ ಇಲಾಖೆಯಲ್ಲಿ ಪ್ರತ್ಯೇಕವಾದ ಯಾವುದೇ ಗ್ರಂಥಾಲಯವಿರುವುದಿಲ್ಲ.

4(1)(ಬಿ) **(xvi)**

ಸಾರ್ವಜನಿಕ ಮಾಹಿತಿ ಅಧಿಕಾರಿಗಳು :

1. ಶ್ರೀ ಎಸ್. ಜೆ. ಸಂಪತ್ ಕುಮಾರ್,
   ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,
   ದೂರವಾಣಿ ಸಂಖ್ಯೆ: 2203 4130

2. ಶ್ರೀ ಆರ್. ಶಿವಲಿಂಗಯ್ಯ,
   ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,
   ದೂರವಾಣಿ ಸಂಖ್ಯೆ: 2203 4063

ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು :

1. ಶ್ರೀ. ರಾಬಿನ್ ವನರಾಜ್. ಜೆ,
   ಶಾಖಾಧಿಕಾರಿ–I ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,
   ದೂರವಾಣಿ ಸಂಖ್ಯೆ: 2203 4145

2. ಶ್ರೀ ಸಿದ್ರಾಮಪ್ಪ ಹ ತಳವಾರ,
   ಶಾಖಾಧಿಕಾರಿ–II, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,
   ದೂರವಾಣಿ ಸಂಖ್ಯೆ: 2203 4129

3. ಶ್ರೀಮತಿ ಶಕುಂತಲಾ ಚೌಗಲಾ,
   ಶಾಖಾಧಿಕಾರಿ– 'ಸಿ' ಶಾಖೆ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,
   ದೂರವಾಣಿ ಸಂಖ್ಯೆ: 2203 4127

4. ಶ್ರೀಮತಿ ವಿ. ರತ್ನಮ್ಮ,
   ಶಾಖಾಧಿಕಾರಿ–ಸ್ವೀ ಮ ರ ಶಾಖೆ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,
   ದೂರವಾಣಿ ಸಂಖ್ಯೆ: 2203 4127

ಮೇಲ್ಮನವಿ ಪ್ರಾಧಿಕಾರ:

1. ಸರ್ಕಾರದ ಉಪ ಕಾರ್ಯದರ್ಶಿ–1,
   ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,
   ಕೊಠಡಿ ಸಂ: 24, ನೆಲಮಹಡಿ, ವಿಕಾಸಸೌಧ, ಬೆಂಗಳೂರು–560 001.
   ದೂರವಾಣಿ ಸಂ: 2203 4149

2. ಸರ್ಕಾರದ ಉಪ ಕಾರ್ಯದರ್ಶಿ–2,
   ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಕೊಠಡಿ ಸಂ: 412, 4ನೇಮಹಡಿ,
   ವಿಕಾಸಸೌಧ, ಬೆಂಗಳೂರು–560 001.
   ದೂರವಾಣಿ ಸಂ: 2203 4768

4(1)(ಬಿ) (xvii)


ಕಾಲ ಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಶಿವಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ–2,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಅನುಬಂಧ –*I*

ಪಿ.ಆರ್. 370

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಸಾಂಸ್ಥಿಕ ನಕ್ಷೆ



REVENUE SECRETARIAT

NOTIFICATION

NO. RD 29 LGP 2012, Bangalore, Dated: 26th April, 2012

The draft of the following rules further to amend the Karnataka grant of land in case of construction of dwelling houses in occupied land rules, 1999, which the Government of Karnataka proposes to make in exercise of the powers conferred by section 197 of the Karnataka Land Revenue Act, 1964 (Karnataka Act 12 of 1964) is hereby published as required by sub-section (1) of section 197 of the said Act for the information of all persons likely to be affected thereby and notice is hereby given that the said draft will be taken into consideration after fifteen days from the dated of its publication in the Official Gazette.

Any objection or suggestion which may be received by the State Government form any person with respect to the said draft before the expiery of the period specified above, will be considered by the State Government. Objections or suggestions may be addressed to the Principal Secretary to Government, Revenue Department, V floor, II State, Multistoried Building, Dr. B.R.Ambedkar Veedhi, Bangalore-560001.

DRAFT RULES

1. **Title and commencement :-** (1) These rules may be called the Karnataka Grant of Land in case of constructions of dwelling houses in occupied land (Amendment) Rules, 2012.

   (2) They shall come into force form the date of their publication in the Official Gazette.

2. **Amendment of the rule 3 :-** In the Karnataka Grant of Land in case of constructions of dwelling houses in occupied land rules 1999, in rule 3, in sub rule (2), for the words and figures ``within 31st day of January, 2012'' the words and figures ``within 31st day of June 2012'' shall be and shall always be deemed to have been substituted.

By Order and in the Name of the Governor of Karnataka

M. KARIYAPPA,

Joint Secretary to Government,

Revenue Department,

PR No. 364

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (ಬಿ–62)(ಭಾ), ಬೆಂಗಳೂರು, ದಿನಾಂಕ: 3ನೇ ಮೇ, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 125 ಎಂಎಲ್‌ಆರ್ 2008 (ಬಿ–62) ದಿನಾಂಕ : 18–08–2009ರಲ್ಲಿ ಸಕಲೇಶಪುರ ಪುರಸಭೆಗೆ ನಾಮನಿರ್ದೇಶನ ಮಾಡಿರುವ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದೆ. ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ II(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸಕಲೇಶಪುರ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮನಿರ್ದೇಶನ ಮಾಡಿದೆ

1. ಶ್ರೀ ಎಸ್.ಡಿ.ಸುರೇಶ್ ಬಿನ್ ದ್ಯಾವೇಗೌಡ, ಕಪ್ಪಿನಕೋಡಿ, ಪ್ರೇಮನಗರ, ಸಕಲೇಶಪುರ.
2. ಶ್ರೀ ಹೆಚ್.ಎ.ದಯಾನಂದ ಬಿನ್ ಅಪ್ಪಸ್ವಾಮಿಗೌಡ, ಚಂಪಕನಗರ, ಸಕಲೇಶಪುರ.
3. ಶ್ರೀ ಡಿ. ಬನ್ನೇರಿ ಬಿನ್ ದೊಡ್ಡಪಟ್ಟ, 8ನೇ ವಾರ್ಡ್, ಕುಶಾಲನಗರ, ಸಕಲೇಶಪುರ.
4. ಶ್ರೀಮತಿ ವನಿತಾ ಸೋಮಣ್ಣ, ಮಲ್ಲಮ್ಮನ ಬೀದಿ, ಸಕಲೇಶಪುರ.
5. ಶ್ರೀ ನಾಗರಾಜ್ ಬಿನ್ ಮಂಜೇಗೌಡ, ಪ್ರೇಮನಗರ, ಸಕಲೇಶಪುರ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ವಿ. ರಾಮಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಪಿ.ಆರ್. ನಂ. 355

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (A–41)(ಭಾಗ), ಬೆಂಗಳೂರು, ದಿನಾಂಕ: 4ನೇ ಮೇ, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 125 ಎಂಎಲ್‌ಆರ್ 2008 (A–41) ದಿನಾಂಕ : 8–01–2010ರಲ್ಲಿ ಹಾಸನ ನಗರಸಭೆಗೆ ಸದಸ್ಯರನ್ನಾಗಿ ನೇಮಿಸಿದ್ದ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ, ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ II(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಹಾಸನ ನಗರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮನಿರ್ದೇಶನ ಮಾಡಿದೆ

1. ಶ್ರೀ ಅರುಣ್ ಕುಮಾರ್ ಡಿ.ಹೆಚ್. ಬಿನ್ ಲೇಟ್ ಹನುಮಂತೇಗೌಡ, ವಲ್ಲಭಬಾಯಿ ರಸ್ತೆ, 3ನೇ ಅಡ್ಡರಸ್ತೆ, ಹಾಸನ.
2. ಶ್ರೀ ರವಿ ಹೆಚ್.ಜಿ. ಬಿನ್ ಗುರುಬಸಪ್ಪ, ಲಕ್ಷ್ಮೀವೆಂಕಟೇಶ್ವರ ನಿಲಯ, 3ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಹೇಮಾವತಿನಗರ, ಹಾಸನ.
3. ಶ್ರೀ ಜಯಶೇಖರ್ ಹೆಚ್.ಜಿ., ಬಿನ್ ಗಂಗಾಧರ ಹೆಚ್.ಜಿ., ಸಿದ್ದಯ್ಯನಗರ, 5ನೇ ಅಡ್ಡರಸ್ತೆ, ಬಿ.ಎಂ. ರಸ್ತೆ, ಹಾಸನ.
4. ಶ್ರೀ ಮಣಿಕಂಠ, ಬಿನ್ ಷಣ್ಮುಗಂ, ಕುಂಬಾರ ಬೀದಿ, 1ನೇ ಅಡ್ಡರಸ್ತೆ, ಹಾಸನ.
5. ಶ್ರೀಮತಿ ರಾಜೇಶ್ವರಿ ಕೋಂ ಲೇಟ್ ಶಿವರಾಜ್, 1ನೇ ಅಡ್ಡರಸ್ತೆ, ಅಡ್ಲಿ ಮನೆ, ಬಸವೇಶ್ವರ ಕಲ್ಯಾಣ ಮಂಟಪ ಹಿಂಭಾಗ, ಹಾಸನ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ವಿ. ರಾಮಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಪಿ.ಆರ್. ನಂ. 356

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (A–24)(ಭಾಗ–II), ಬೆಂಗಳೂರು, ದಿನಾಂಕ: 3ನೇ ಮೇ, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 125 ಎಂಎಲ್‌ಆರ್ 2008 (A–24) ದಿನಾಂಕ : 19–02–2012ರಲ್ಲಿ ಚಿತ್ರದುರ್ಗ ನಗರಸಭೆಗೆ ನಾಮ ನಿರ್ದೇಶನ ಮಾಡಿರುವ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದೆ, ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ 11(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಚಿತ್ರದುರ್ಗ ನಗರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮನಿರ್ದೇಶನ ಮಾಡಿದೆ

1. ಶ್ರೀ ವಿಜಯರಾಜ್ ಬಿನ್ ಆಧಾರಾಮ್, ನೀಲಕಂಠೇಶ್ವರ ಬಡಾವಣೆ, ಸಿಂಗಾಶೆಟ್ಟಿ ಬಿಲ್ಡಿಂಗ್, ಡಿ.ಆರ್.ಎಂ.ಆಸ್ಪತ್ರೆ ಹತ್ತಿರ, ಚಿತ್ರದುರ್ಗ.
2. ಶ್ರೀ ಕೆ. ನಂಜುಂಡಸ್ವಾಮಿ ಬಿನ್ ಕಸ್ತೂರಪ್ಪ, ಕಾಮನಬಾವಿ ಬಡಾವಣೆ, ಚಿತ್ರದುರ್ಗ.
3. ಶ್ರೀಮತಿ ಸಿ. ಸುನೀತ ಕೋಂ ಎಂ. ಲೋಕೇಶ್, ಬಾಬು ಜಗಜೀವನರಾಂ ನಗರ, ಐ.ಯು.ಡಿ.ಪಿ.ಲೇ–ಔಟ್, ಚಿತ್ರದುರ್ಗ.
4. ಶ್ರೀ ಎನ್.ಈ. ನಾಗರಾಜ್ ಬಿನ್ ಎನ್.ಜಿ. ಈಶ್ವರಪ್ಪ, ನೆಹರು ನಗರ, ಮಸೀದಿ ರಸ್ತೆ, ಚಿತ್ರದುರ್ಗ.
5. ಶ್ರೀ ಈ. ದೇವೇಂದ್ರಪ್ಪ ಬಿನ್ ಈಶ್ವರಪ್ಪ, ಹೊಂಡದ ರಸ್ತೆ, ಬುರುಜನಕಟ್ಟೆ, ಚಿತ್ರದುರ್ಗ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ವಿ. ರಾಮಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಪಿ.ಆರ್. ನಂ. 357

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (B–68)(ಭಾಗ), ಬೆಂಗಳೂರು, ದಿನಾಂಕ: 8ನೇ ಮೇ, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 125 ಎಂಎಲ್‌ಆರ್ 2008 (B–68) ದಿನಾಂಕ : 24–12–2009ರಲ್ಲಿ ಮುಳಬಾಗಿಲು ಪುರಸಭೆಗೆ ಸದಸ್ಯರನ್ನಾಗಿ ನೇಮಿಸಿದ್ದ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ

II(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮುಳಬಾಗಿಲು ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮನಿರ್ದೇಶನ ಮಾಡಿದೆ

1. ಶ್ರೀ ಟಿ.ಆರ್. ನಾಗರಾಜ್ ಬಿನ್ ಬಿ.ವಿ.ರಾಮಯ್ಯಶೆಟ್ಟಿ, ಕೋದಂಡರಾಮಸ್ವಾಮಿ ಗುಡಿ ಬೀದಿ, ಮುಳಬಾಗಿಲು.
2. ಶ್ರೀ ಜಗನ್ನಾಥ್ ಬಿನ್ ಆಂಜಪ್ಪ, ಮುತ್ಯಾಲಪೇಟೆ, ಮುಳಬಾಗಿಲು.
3. ಶ್ರೀ ವಿ. ಶಂಕರ ಬಿನ್ ವೆಂಕಟಪ್ಪ, ಪಳ್ಳಿಗರ ಪಾಳ್ಯ, ಮುಳಬಾಗಿಲು.
4. ಶ್ರೀ ರವಿ ಬಿನ್ ಮುನಿಯಪ್ಪ, ವಿಶೇಲೇಶ್ವರ ಪಾಳ್ಯ, ಮುಳಬಾಗಿಲು.
5. ಶ್ರೀ ವಿ. ಶ್ಯಾಮಸುಂದರ್ ಬಿನ್ ಧ್ರುವ, ತ್ಯಾಗರಾಜ ಕಾಲೋನಿ, ಮುಳಬಾಗಿಲು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ವಿ. ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. ನಂ. 362

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 110 ಎಂಆರ್ಇ 2012, ಬೆಂಗಳೂರು, ದಿನಾಂಕ : 7ನೇ ಮೇ, 2012.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 11(1)(ix)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಪುತ್ತೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡ ಮೂವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ.

ಕ್ರಮ ಸಂ.	ಸದಸ್ಯರ ಹೆಸರು ಶ್ರೀಯುತರು/ಶ್ರೀಮತಿ
01	ಶ್ರೀ ಮನೋಹರ ರೈ ಎ.ಬಿ., ಬಿನ್ ಮಂಜಪ್ಪ ರೈ, ಆಲಿಮಾರು ಮನೆ, ಬಂಟ್ರ ಗ್ರಾಮ, ಮರ್ದಾಳ ಅಂಚೆ, ಪುತ್ತೂರು ತಾಲ್ಲೂಕು.
02	ಎ. ಉಮೇಶ್ ಶೆಣೈ ಬಿನ್ ಶ್ರೀನಿವಾಸ ಶಾನುಭೋಗ, ಆರ್ಯಮುಗೇರು ಮನೆ, ಚಿಕ್ಕಮುಡ್ನೂರು ಗ್ರಾಮ & ಅಂಚೆ, ಪುತ್ತೂರು ತಾಲ್ಲೂಕು.
03	ಶ್ರೀ ಬೆಳಿಯಪ್ಪ ಗೌಡ ಬಿನ್ ನಾರ್ಣಪ್ಪ ಗೌಡ, ಪೆಲತ್ತಾಡಿ ಮನೆ, ಶಾಂತಿಗೋಡು ಗ್ರಾಮ, ಸರ್ವೆ ಅಂಚೆ, ಪುತ್ತೂರು ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ – 1
ಸಹಕಾರ ಇಲಾಖೆ

ಪಿ.ಆರ್. ನಂ. 367

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 33 ಕಾಬಾನಿ 2012, ಬೆಂಗಳೂರು, ದಿನಾಂಕ : 7ನೇ ಮೇ, 2012.

ದಿ ಇಂಡಿಯನ್ ಬಾಯ್ಲರ್ ಆಕ್ಟ್ 1923ರ ಕಲಂ 34(2) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಮೆ. ಜಮಖಂಡಿ ಶುಗರ್ಸ್ ಲಿ., ಹಿರೇಪಡಸಲಗಿ, ಜಮಖಂಡಿ, ಬಾಗಲಕೋಟೆ ಜಿಲ್ಲೆ, ರವರ ಬಾಯ್ಲರ್ ಸಂ.ಎಂ.ಆರ್–8934ನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ದಿನಾಂಕ : 04–05–2012 ರಿಂದ 3–7–2012 ರವರೆಗೆ 02 ತಿಂಗಳ ಅವಧಿಗೆ ಸದರಿ ಕಾಯ್ದೆಯ ಅಧಿನಿಯಮ 8ರ ವ್ಯಾಪ್ತಿಯಿಂದ ವಿನಾಯಿತಿಯನ್ನು ನೀಡಿದೆ.

1. ಬಾಯ್ಲರನ್ನು ಹಿಂದಿನ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಕಾರ್ಯ ಒತ್ತಡವನ್ನು ಮೀರಿ ಉಪಯೋಗಿಸಬಾರದು.
2. ಬಾಯ್ಲರನ್ನು ಗರಿಷ್ಠ ಉಷ್ಣಾಂಶ ಮೀರದಂತೆ ನಿರ್ವಹಿಸತಕ್ಕದ್ದು.

3. ಈ ಬಾಯ್ಲರನ್ನು ಪ್ರಮಾಣ ಪತ್ರ ಹೊಂದಿದ ಬಾಯ್ಲರ್ ಆಪರೇಷನ್ ಇಂಜಿನಿಯರ್‌ರವರ ನೇರ ಉಸ್ತುವಾರಿಯಲ್ಲಿ ನಡೆಸಬೇಕು.

4. ಬಾಯ್ಲರಿನ ಗರಿಷ್ಠ ಸ್ಟೀಂ ಉತ್ಪಾದನೆಯು ಗೊತ್ತುಪಡಿಸಿದ ಸಾಮರ್ಥ್ಯಕ್ಕಿಂತ ಮೀರತಕ್ಕದ್ದಲ್ಲ.

5. ಫೀಡ್ ವಾಟರ್ ಮತ್ತು ಬಾಯ್ಲರ್ ವಾಟರಿನ ಗುಣಮಟ್ಟವು ಐಬಿಆರ್ 1950ರ ಅಧ್ಯಾಯ 15 ರಲ್ಲಿ ತಿಳಿಸಿರುವಂತೆ ನಿರ್ವಹಿಸತಕ್ಕದ್ದು.

6. ಬಾಯ್ಲರಿನ ಯಾವುದೇ ಒತ್ತಡದ ಭಾಗದಲ್ಲಿ ನ್ಯೂನತೆ ಕಂಡುಬಂದಲ್ಲಿ ತಕ್ಷಣ ಬಾಯ್ಲರನ್ನು ನಿಲ್ಲಿಸಿ ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳು ಮತ್ತು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಗೆ ವರದಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ಶಿವರಾಮ ಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ
(ಕಾರ್ಖಾನೆ ಮತ್ತು ಬಾಯ್ಲರುಗಳು)

ಪಿ.ಆರ್. ನಂ. 368

HOME SECRETARIAT

NOTIFICATION

NO. HD 63 POP 2012, Bangalore, Dated: 4th May, 2012

In exercise of the powers conferred by the clause(s) of the code of Criminal Procedure, (Central Act 2 of 1974), and in partial modification of earlier notifications issued in this behalf, the Government of Karnataka, hereby declare that with effect from the date of publication of this Notification in the Official Gazette, the areas and places specified in column (3) of the schedule below, shall cease to be within the jurisdiction of the Police Station specified in column (4) thereof and the said areas and place shall be included within the jurisdiction of the Police Station specified in column (2), thereof.

SCHEDULE

Name of the District/Police Sub-Division/Circle	Name of the police station in which the areas and places specified in column (3) shall be included	Name of the areas and places	Name of the Police Station from the jurisdiction of which the areas and places specified in column (3) shall be excluded
(1)	(2)	(3)	(4)
Koppal District Koppal Sub-division	Koppal Traffic Police Station	1. Complete area of Koppal Town Municipal limits and Bhagyanagar Gram Panchayat limits. 2. National Highway No. 63 of Karwar-Gooty road from mile No. 255.100 to the gate of fire Brigade Station.	Koppal Town Police Station, only inrespect of Traffic Offences under the provisions of Law, which are defined below here at `A'

A. The Traffic Police Stations specified in column (2) shall be responsible for investigation of the offences under :-

1. The Karnataka Traffic Control Act, 1960 (Karnataka Act No. 18 of 1960)
2. The Karnataka Traffic (Control of Public Vehicles) Rules 1979.
3. The Karnataka Traffic Control (Regulation of Traffic on Highways) Rules, 1979 and the Karnataka Traffic Control Rules, 1979.
4. The Karnataka Public Conveyance Act, 1961 (Karnataka Act 20 of 1962)
5. The Motor Vehicles Act, 1988 (Central Act 59 of 1988) and the Karnataka Motor Vehicles Rules 1989.
6. Offences under sections 279,304(A), 337,338 and 427 of Indian Penal Code, 1860.

B. With respect to remaining all other types of offences, the Koppal Town Police Station will continue to have its original jurisdiction.

By Order and in the Name of the Governor of Karnataka
B. RAJAMMA,
Under Secretary to Government,
Home Department
(Police Expenditure)

PR No. 339

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 402 ವೆಚ್ಚ – 12/12, ಬೆಂಗಳೂರು, ದಿನಾಂಕ: 5ನೇ ಮೇ, 2012.

ದೆಹಲಿಯ "Sunday Standard" ವಾರಪತ್ರಿಕೆಯಲ್ಲಿ 'ಸಕಾಲ'ದ ಬಗ್ಗೆ ಜಾಹೀರಾತನ್ನು ರೂ. 4.25 ಲಕ್ಷಗಳ ವೆಚ್ಚದಲ್ಲಿ ಮುದ್ರಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸಿಆಸುಇ (ಆಸು) ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಿಆಸುಇ (ಆಸು) ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕಾಂತ ಎಸ್.
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್. ನಂ. 350

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 442 ವೆಚ್ಚ – 12/12, ಬೆಂಗಳೂರು, ದಿನಾಂಕ: 9ನೇ ಮೇ, 2012.

ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಈ ಹಿಂದೆ ಫಿಂಗರ್ ಪ್ರಿಂಟ್ ರೀಡರ್‌ಗಳನ್ನು ಒದಗಿಸಿದ್ದ ಮೆ. ವಿಪ್ರೋ ಸಂಸ್ಥೆಯಿಂದ ನೇರವಾಗಿ 4862 ಸಂಖ್ಯೆಯ ಫಿಂಗರ್ ಪ್ರಿಂಟ್ ರೀಡರ್‌ಗಳನ್ನು ಉಪಕರಣವೊಂದಕ್ಕೆ ತಲಾ ರೂ. 4105/– ದರದಲ್ಲಿ ಒಟ್ಟು ರೂ. 1,99,58,510/– ಗಳ ವೆಚ್ಚದಲ್ಲಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಉಪಕರಣಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕಾಂತ ಎಸ್.
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್. ನಂ. 351

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 353 ವೆಚ್ಚ – 12/12, ಬೆಂಗಳೂರು, ದಿನಾಂಕ: 5ನೇ ಮೇ, 2012.

ಕರ್ನಾಟಕ ವಿಧಾನ ಮಂಡಲದ ಇ–ಗ್ರಂಥಾಲಯಕ್ಕೆ ಅಗತ್ಯವಿರುವ ಪೀಠೋಪಕರಣಗಳನ್ನು ರೂ. 36,66,768/– ವೆಚ್ಚದಲ್ಲಿ ನೇರವಾಗಿ ಮೆ. ಗೋದ್ರೆಜ್ ಸಂಸ್ಥೆಯಿಂದ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಕರ್ನಾಟಕ ವಿಧಾನ ಸಭೆ ಸಚಿವಾಲಯಕ್ಕೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಪೀಠೋಪಕರಣಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಕರ್ನಾಟಕ ವಿಧಾನ ಸಭೆ ಸಚಿವಾಲಯವು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕಾಂತ ಎಸ್.
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್. ನಂ. 352

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 13 SMR 2012, Bangalore, Dated: 2nd May, 2012

In exercise of the powers conferred by clause(ff) of rule 3 of the Karnataka Government Servants (Medical Attendance) Rules 1963, the Government of Karnataka hereby adds the following item after item 24 under the sub heading **`Diagnostic Centres'** of Schedule I to the said rules namely :-

(25) Isha Diagnostics and Research Pvt. Ltd., #311, Sampige Road, between 15th & 16th Cross, Malleswaram, Bangalore-560003.

By Order and in the Name of the Governor of Karnataka
D. NAGESH PHATAK
Under Secretary to Government,
Department of Personnel and Administrative Reforms
(Service Rules)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 13 ಎಸ್ಎಂಆರ್ 2012, ಬೆಂಗಳೂರು, ದಿನಾಂಕ: 2ನೇ ಮೇ, 2012.

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 3ರ ಖಂಡ (ಎಫ್ಎಫ್)ನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ನಿಯಮಗಳ ಷೆಡ್ಯೂಲ್–1 ರ **'ಡಯಾಗ್ನೊಸ್ಟಿಕ್ ಸೆಂಟರ್'** ಉಪ ಶೀರ್ಷಿಕೆಯಡಿ ಐಟಂ 24ರ ನಂತರ ಈ ಕೆಳಕಂಡ ಐಟಂನ್ನು ಸೇರ್ಪಡೆಗೊಳಿಸಿದೆ :–

(25) ಇಶಾ ಡಯಾಗ್ನೊಸ್ಟಿಕ್ಸ್ ಮತ್ತು ರಿಸರ್ಚ್ ಪ್ರೈ. ಲಿಮಿಟೆಡ್, # 311, ಸಂಪಿಗೆ ರಸ್ತೆ, 15 ಮತ್ತು 16 ನೇ ಕ್ರಾಸ್ ಮಧ್ಯೆ, ಮಲ್ಲೇಶ್ವರಂ, ಬೆಂಗಳೂರು–560003.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ. ನಾಗೇಶ್ ಪಾಟಕ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)

ಪಿ.ಆರ್. ನಂ. 353

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 14 SMR 2012, Bangalore, Dated: 2nd May, 2012

In exercise of the powers conferred by clause(ff) of rule 3 of the Karnataka Government Servants (Medical Attendance) Rules 1963, the Government of Karnataka hereby substitutes the entries at Sl. No. 3 of sub-heading (a) of Schedule II to the said rules, as follows :-

(3) I-AIM Healthcare Centre, 74/2, Jarakabande Kaval (Behind CRPF Campus), Post Attur, Via Yelahanka, Bangalore-560 106.

By Order and in the Name of the Governor of Karnataka
D. NAGESH PHATAK
Under Secretary to Government,
Department of Personnel and Administrative Reforms
(Service Rules)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 14 ಎಸ್‌ಎಂಆರ್ 2012, ಬೆಂಗಳೂರು, ದಿನಾಂಕ: 2ನೇ ಮೇ, 2012.

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 3ರ ಖಂಡ (ಎಫ್‌ಎಫ್)ನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ನಿಯಮಗಳ ಷೆಡ್ಯೂಲ್–II ರ ಉಪ ಶೀರ್ಷಿಕೆ (ಅ) ರ ಕ್ರಮ ಸಂಖ್ಯೆ 3ರಲ್ಲಿನ ನಮೂದಿನ ಬದಲಾಗಿ ಈ ಕೆಳಕಂಡಂತೆ ಸೇರ್ಪಡೆಗೊಳಿಸಿದೆ :–

(3) ಐ–ಎಐಎಮ್ ಹೆಲ್ತ್ ಕೇರ್ ಸೆಂಟರ್, 74/2, ಜಾರಕಬಂಡೆ ಕಾವಲ್ (ಸಿಆರ್‌ಪಿಎಫ್ ಕ್ಯಾಂಪಸ್ ಹಿಂಭಾಗ), ಅಟ್ಟೂರು ಅಂಚೆ, ಯಲಹಂಕ ಮಾರ್ಗ, ಬೆಂಗಳೂರು–560 106.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ. ನಾಗೇಶ್ ಪಾಟಕ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)

ಪಿ.ಆರ್. ನಂ. 354

KARNATAKA GOVERNOR'S SECRETARIAT

NOTIFICATION

No. GS 10 TUM 2011 (P), Bangalore, Dated: 7th May, 2012

Whereas, an inquiry has been ordered to probe into the allegations made against Dr. H. Maheshappa that he made false claims in his profile submitted for selection as Vice Chancellor, Visvesvaraya Technological University, Belgaum, vide Notification No. GS 10 TUM 2011 (P) dated 31st January 2012.

Whereas, Justice Shri Abhay Gohil, retired Judge of Madhya Pradesh High Court and former Chairman of Appellate Authority of Industrial and Financial Reconstruction, New Delhi has been appointed as Commission of Inquiry to inquire into the complaints.

Whereas, the Inquiry Commission has been requested to submit the report of inquiry within three months from the date the Commission commences its work. The Inquiry Commission commenced its works on 09-02-2012.

Whereas, Justice Shri Abhay Gohil has sought extension of four to six months of time to complete the inquiry and submit the report.

And now, therefore, I, H.R. Bhardwaj, Governor of Karnataka and Chancellor of the Universities in Karnataka, hereby extend the term of the Inquiry Commission for a further period of three months with effect from 9th May 2012. The other terms of reference stipulated in Notification dated 31st January 2012 shall remain unaltered.

H. R. BHARDWAJ,
Governor of Karnataka
and Chancellor of Universities

V. S. JERE
Under Secretary to Governor

PR No. 360

KARNATAKA GOVERNOR'S SECRETARIAT

NOTIFICATION

No. GS 10 TUM 2011 (P), Bangalore, Dated: 7th May, 2012

Whereas, Justice Shri Abhay Gohil, retired Judge of Madhya Pradesh High Court and former Chairman of Appellate Authority of Industrial and Financial Reconstruction, New Delhi has been appointed as One man Inquiry Commission vide Notification No. GS 10 TUM 2011 (P) dated 31-01-2012, to inquire into the allegations of false claims in the profile submitted for selection as Vice-Chancellor, Visvesvaraya Technological University, Belgaum, by Dr. H. Maheshappa.

Whereas, as per the terms of appointment, the terms relating to remuneration will have to be issued separately. Accordingly, it is ordered that Justice Shri Abhay Gohil is eligible to the remuneration as given below :

i) Basic Pay :- Rs. 80,000/- + admissible DA & HRA (minus Pension + DA on pension)

ii) Perquisites as per the High Court Judges Act, 1954 and The High Court Judges Rules, 1956.

1.	Sumptuary allowance (Section 22 (C) of the High Court Judges Act, 1954	Rs. 12,000
2.	Amount equivalent to 200 ltrs of petrol at current rate (Section 22(B) of the High Court Judges Act, 1954.	Rs. Actuals
3.	Electricity and Water charges (As per Rule 2E of the High Court Judges Rules, 1956	Rs. Actuals
4.	News Papers and Periodicals (Fifteen periodicals including two news papers and two Law Journals) (Government Order No. DPAR 20 SHC 97, Bangalore, dated 18-02-1997)	Rs. Actuals
5.	Telephone charges/expenses (actuals) vide G.O. No. FD 02 DEM 98 Bangalore, dated 05-11-1998	Rs. Actuals
6.	Mobile expenses Rs. 3,000 per month vide G.O. No. ಆಇ 10 BEM 2007, Bangalore, dated 18-12-2007.	Rs. 3,000

H. R. BHARDWAJ,
Governor of Karnataka
and Chancellor of Universities

V. S. JERE
Under Secretary to Governor

PR No. 361

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾಪ್ರ 1096 ಕಸಧ 2011, ಬೆಂಗಳೂರು, ದಿನಾಂಕ: 7ನೇ ಮೇ, 2012.

ಶ್ರೀ ಗೊ.ರು. ಚನ್ನಬಸಪ್ಪರವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಜಾನಪದ ವಿಶ್ವವಿದ್ಯಾಲಯ ಪ್ರಾರಂಭವಾಗುವವರೆಗೆ ಅಥವಾ ಮುಂದಿನ ಆದೇಶದವರೆಗೆ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಗೆ ಈ ಕೆಳಕಂಡ ಗಣ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನೇಮಿಸಲಾಗಿದೆ.

1. ಡಾ. ರಾಮು ಮೂಲಗಿ, ಹುಬ್ಬಳ್ಳಿ–ಧಾರವಾಡ

2. ಶ್ರೀ ಎಂ.ಕೆ. ಸಿದ್ದರಾಜು, ಬೆಂಗಳೂರು ಗ್ರಾಮಾಂತರ
3. ಡಾ. ಟಿ. ಗೋವಿಂದರಾಜ್, ಬೆಂಗಳೂರು
4. ಶ್ರೀ ಗೊಲ್ಲಹಳ್ಳಿ ಶಿವಪ್ರಸಾದ್, ಚಿಕ್ಕಬಳ್ಳಾಪುರ
5. ಡಾ. ಅಂಬಳಿಕೆ ಹಿರಿಯಣ್ಣ, ಶಿವಮೊಗ್ಗ
6. ಶ್ರೀ ಜಗನ್ನಾಥ ಹೆಬ್ಬಾಳೆ, ಬೀದರ್
7. ಶ್ರೀ ಹಾಸನ್‌ರಘು, ಹಾಸನ
8. ಶ್ರೀಮತಿ ಶಾಲಿನಿ ರಘುನಾಥ್, ಧಾರವಾಡ
9. ಶ್ರೀ ಲಂಕಪ್ಪ ಬಿನ್ ತಿಮ್ಮಪ್ಪ ಭಜಂತ್ರಿ, ರಾಯಚೂರು
10. ಶ್ರೀ ಮಲ್ಲಪ್ಪ ಗಣಿ, ಬಾಗಲಕೋಟೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ವಿ. ರಾಮಚಂದ್ರರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ

ಪಿ.ಆರ್. ನಂ. 363

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 432 ವೆಚ್ಚ–12/12, ಬೆಂಗಳೂರು, ದಿನಾಂಕ : 2–5–2012.

ಅಭಿವೃದ್ಧಿ ಯೋಜನೆಗಳ ಫಲಾನುಭವಿಗಳಿಗೆ ಹಣಕಾಸು ಸಂದಾಯ ಮಾಡುವ ರಾಜ್ಯ ಸರ್ಕಾರದ ಪ್ರಯತ್ನಗಳನ್ನು ನಿರ್ವಹಿಸಲು, ಶ್ರೀ ರಾಮನಾಥನ್, ನಿವೃತ್ತ ಜನರಲ್ ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, ಇವರನ್ನು ಮಾಸಿಕ ರೂ. 55,000/– ಗಳ ಸಮಾಲೋಚನಾ ಶುಲ್ಕ ಮತ್ತು ಹೊರಗುತ್ತಿಗೆ ಆಧಾರ ಮೇಲೆ ಒಂದು ವಾಹನವನ್ನು ಒದಗಿಸುವ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸಮಾಲೋಚಕರನ್ನಾಗಿ ನೇಮಕ ಮಾಡಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಆರ್ಥಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಎನ್. ಶ್ರೀಧರ್

ಸರ್ಕಾರದ ಅಪರ ಕಾರ್ಯದರ್ಶಿ (ಆಡಳಿತ),

ಆರ್ಥಿಕ ಇಲಾಖೆ.

ಪಿ.ಆರ್. 347

CO-OPERATION SECRETARIAT

NOTIFICATION

No: CD 234 MRE 2011, BANGALORE, DATED: 19-4-2012.

In exercise of the powers conferred under Sub-Section 4 of Section 13 of Karnataka Agricultural Produce Marketing (Regulation & Development) Act, 1966 Government hereby withdraw the notification No. CMW 148 MRE 96 (P), dated 21-12-96 with immediate effect.

Government also hereby directs that election to the Fruits and Vegetables (Special) Agricultural Marketing Committee, Bangalore shall also be conducted immediately.

By order and in the name of the Governor of Karnataka,

C.K. VASUDEVA MURTHY

Under Secretary to Government,

Co-operation Department.

P.R. 348

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 277 ಪಿಎಂಎಸ್ 2011, ಬೆಂಗಳೂರು, ದಿನಾಂಕ : 16–4–2012.

1872 ರ ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ ಕಾಯಿದೆಯು ಕಲಂ 9ರ (ಕೇಂದ್ರ ಕಾಯ್ದೆ ಎಕ್ಸ್ ವಿ–1872) ಅನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ (ಕರ್ನಾಟಕ) ನಿಯಮಗಳು 1961 ರಂತೆ ಕಾರ್ಯನಿರ್ವಹಿಸಲು ಪಾಸ್ಟರ್ ಶೈನ್ ಪಿ. ಥಾಮಸ್, ನಂ. 847, 11ನೇ ಕ್ರಾಸ್, 2ನೇ ಹಂತ, 3ನೇ ಬ್ಲಾಕ್, ಹೆಚ್.ಬಿ.ಆರ್. ಲೇಔಟ್, ಕಲ್ಯಾಣನಗರ, ಬೆಂಗಳೂರು–560048 ಇವರಿಗೆ ಬೆಂಗಳೂರು ನಗರ ಜಿಲ್ಲೆಯ ಆಡಳಿತ ವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಿ, ಸದರಿ ಕಾಯ್ದೆ ಅಡಿಯಲ್ಲಿ ಸೂಚಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಅನುಮತಿಯನ್ನು ಈ ಮೂಲಕ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ. ನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ರಹದಾರಿ ಮತ್ತು ವಿದೇಶಿಯರು).

ಪಿ.ಆರ್. 326

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 108 ಎಂಆರ್‌ಇ 2012, ಬೆಂಗಳೂರು, ದಿನಾಂಕ : 26ನೇ ಏಪ್ರಿಲ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಇ 115 ಎಂಆರ್‌ಇ (2) 2008 (ಭಾಗ) ದಿನಾಂಕ : 31–8–2010 ರಲ್ಲಿ ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಶ್ರೀ ಅಮರೇಗೌಡ ವೀರನಗೌಡ ಪೊಲೀಸ್ ಪಾಟೀಲ, ವೆಂಕಟಗಿರಿ, ಗಂಗಾವತಿ ತಾಲ್ಲೂಕು ಇವರನ್ನು ಅಧ್ಯಕ್ಷರನ್ನಾಗಿ ಮತ್ತು ಶ್ರೀ ರಾಜ ಚಚ್ಚಪ್ಪ ನಾಯಕ ತಂದೆ ಉಡಚಪ್ಪ ನಾಯಕ, ಹುಲಿಹೈದರ ಇವರನ್ನು ಉಪಾಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಿರುವುದನ್ನು ದಿನಾಂಕ : 31–8–2012ರ ವರೆಗೆ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1,
ಸಹಕಾರ ಇಲಾಖೆ.

ಪಿ.ಆರ್. 327

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 109 ಎಂಆರ್‌ಇ 2012, ಬೆಂಗಳೂರು, ದಿನಾಂಕ : 26ನೇ ಏಪ್ರಿಲ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಇ 115 ಎಂಆರ್‌ಇ (1) 2008 (ಭಾಗ) ದಿನಾಂಕ : 31–8–2010 ರಲ್ಲಿ ಕಾರಟಗಿ ಭತ್ತ ಮತ್ತು ಅಕ್ಕಿ ಉತ್ಪನ್ನಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಶ್ರೀ ಬಸಪ್ಪ ತಂದೆ ಗುಂಡಪ್ಪ ಅರಳಿ, ಅರಳಿ ಸ್ಟ್ರೀಟ್, ಕಾರಟಗಿ ಇವರನ್ನು ಅಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಿರುವುದನ್ನು ದಿನಾಂಕ : 31–8–2012ರ ವರೆಗೆ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1,
ಸಹಕಾರ ಇಲಾಖೆ.

ಪಿ.ಆರ್. 328